ಕರ್ನಾಟಕ ಸರ್ಕಾರ

ವಯಸ್ಸು 4 ರಿಂದ 5 ವರ್ಷಗಳು

# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

### ಪುಸ್ತಕ 3

- ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ
- ಆಕೃತಿಗಳನ್ನು ತಿಳಿಯುವುದು





ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

ಸಮಗ್ರ ಶಿಕ್ಷಣ ಕರ್ನಾಟಕ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

# ಪರಿವಿಡಿ

## ವಿಷಯ 3: ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ


**ಉಪವಿಷಯ 3.1: ಆಚರಣೆಗಳು ಮತ್ತು ಹಬ್ಬಗಳು**

ಸಂಭಾಷಣೆ . . . . . . . . . . . . . . . . . . . . . . . . . . 2
ಯೋಜನಾ ಕಾರ್ಯಗಳು . . . . . . . . . . . . . . . . . . . . . 7
ಶಿಶುಗೀತೆಗಳು . . . . . . . . . . . . . . . . . . . . . . . . 8
ಕಥೆ . . . . . . . . . . . . . . . . . . . . . . . . . . . 12
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . . 14
ಒಳಾಂಗಣ ಆಟಗಳು . . . . . . . . . . . . . . . . . . . . . 16
ಹೊರಾಂಗಣ ಆಟಗಳು . . . . . . . . . . . . . . . . . . . . 17
Total Physical Response . . . . . . . . . . . . . . . . . . 18

**ಉಪವಿಷಯ 3.2: ಸ್ಥಳೀಯ ಜಾತ್ರೆಗಳು**

ಸಂಭಾಷಣೆ . . . . . . . . . . . . . . . . . . . . . . . . . 22
ಯೋಜನಾ ಕಾರ್ಯಗಳು . . . . . . . . . . . . . . . . . . . . 25
ಶಿಶುಗೀತೆಗಳು . . . . . . . . . . . . . . . . . . . . . . . 27
ಕಥೆ . . . . . . . . . . . . . . . . . . . . . . . . . . . 31
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . . 33
ಒಳಾಂಗಣ ಆಟಗಳು . . . . . . . . . . . . . . . . . . . . . 35
ಹೊರಾಂಗಣ ಆಟಗಳು . . . . . . . . . . . . . . . . . . . . 37
Total Physical Response . . . . . . . . . . . . . . . . . . 38

**ಉಪವಿಷಯ 3.3: ರಾಷ್ಟ್ರೀಯ/ರಾಜ್ಯದ ಚಿಹ್ನೆಗಳು ಮತ್ತು ಹಬ್ಬಗಳು**

ಸಂಭಾಷಣೆ . . . . . . . . . . . . . . . . . . . . . . . . . 42
ಯೋಜನಾ ಕಾರ್ಯಗಳು . . . . . . . . . . . . . . . . . . . . 45
ಶಿಶುಗೀತೆಗಳು . . . . . . . . . . . . . . . . . . . . . . . 46
ಕಥೆ . . . . . . . . . . . . . . . . . . . . . . . . . . . 51
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . . 53
ಒಳಾಂಗಣ ಆಟಗಳು . . . . . . . . . . . . . . . . . . . . . 54
ಹೊರಾಂಗಣ ಆಟಗಳು . . . . . . . . . . . . . . . . . . . . 56
Total Physical Response . . . . . . . . . . . . . . . . . . 57



## ಆಕೃತಿಗಳನ್ನು ತಿಳಿಯುವುದು


ಸಿದ್ಧತಾ ಚಟುವಟಿಕೆಗಳು . . . . . . . . . . . . . . . . . . . 62
ಅನ್ವೇಷಣಾ ಚಟುವಟಿಕೆ . . . . . . . . . . . . . . . . . . . . 65
ವಿಸ್ತರಣಾ ಚಟುವಟಿಕೆ . . . . . . . . . . . . . . . . . . . . 68




ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ


ಸಂಭಾಷಣೆ


ಯೋಜನಾ ಕಾರ್ಯಗಳು


ಶಿಶುಗೀತೆಗಳು


ಕಥೆ



Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ-ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ


ಒಳಾಂಗಣ ಆಟಗಳು



ಹೊರಾಂಗಣ ಆಟಗಳು



ಸೃಜನಾತ್ಮಕ ಚಟುವಟಿಕೆಗಳು


---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ


ಸಿದ್ಧತಾ ಚಟುವಟಿಕೆಗಳು


ಪರಿಶೋಧನಾತ್ಮಕ ಚಟುವಟಿಕೆಗಳು


ವಿಸ್ತರಣಾ ಚಟುವಟಿಕೆ


ಅನ್ವಯಿಸುವಿಕೆ

# ಕೃತಜ್ಞತೆಗಳು

2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ಧಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟ್ರೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweavers.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**(ಡಾ. ಎಂ.ಟಿ. ರೇಜು, ಭಾ.ಆ.ಸೇ.)**
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು



## ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ

# ಆಚರಣೆಗಳು ಮತ್ತು ಹಬ್ಬಗಳು





# ಕಲಿಕಾ ಫಲಿತಗಳು

## ಉಪವಿಷಯ 3.1: ಆಚರಣೆಗಳು ಮತ್ತು ಹಬ್ಬಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಆಚರಣೆಗಳು ಇತರೆ ದಿನಗಳಿಗಿಂತ ವಿಭಿನ್ನವಾಗಿವೆ ಮತ್ತು ಅಂದಿನ ದಿನ ವಿಭಿನ್ನವಾಗಿ ಏನು ಮಾಡುತ್ತಾರೆ. ಎಂಬುದನ್ನು ಅರ್ಥಮಾಡಿಕೊಳ್ಳುವುದು. | 1 ಅವರ ಸಮುದಾಯದಲ್ಲಿ ಆಚರಿಸುವ 3 ಪ್ರಮುಖ ಹಬ್ಬಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು. | 1 ಸಮುದಾಯದ ಪ್ರಮುಖ ಹಬ್ಬಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು. |
| 2 ಅವರ ಹುಟ್ಟುಹಬ್ಬದ ತಿಂಗಳನ್ನು ತಿಳಿದುಕೊಳ್ಳುವುದು ಮತ್ತು ಅವರ ವಯಸ್ಸಿನೊಂದಿಗೆ ಹುಟ್ಟುಹಬ್ಬವನ್ನು ಪ್ರಶಂಸಿಸುವುದು. | 2 ಹಬ್ಬದ ಪ್ರಾಥಮಿಕ ಗುಣಲಕ್ಷಣಗಳು/ ಘಟನೆ/ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು. ಉಲ್ಲೇಖದೊಂದಿಗೆ– ಧಾರ್ಮಿಕ ಹಬ್ಬಗಳ ಪ್ರಮುಖ ಭಾಗವಾಗಿ ಪ್ರಾರ್ಥನೆ, ವಿಶೇಷ ಆಹಾರಗಳು ಮತ್ತು ಬಟ್ಟೆಗಳು, ಸಭೆ ಮತ್ತು ಶುಭಾಶಯ. | 2 ಹಬ್ಬದ ಪ್ರಾಥಮಿಕ ಗುಣಲಕ್ಷಣಗಳು/ಘಟನೆ/ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವುದು. ಉಲ್ಲೇಖದೊಂದಿಗೆ–ಧಾರ್ಮಿಕ ಹಬ್ಬಗಳ ಪ್ರಮುಖ ಭಾಗವಾಗಿ ಪ್ರಾರ್ಥನೆ, ವಿಶೇಷ ಆಹಾರಗಳು ಮತ್ತು ಬಟ್ಟೆಗಳು, ಸಭೆ ಮತ್ತು ಶುಭಾಶಯಗಳ ಬಗ್ಗೆ ತಿಳಿಯುವುದು. |
| 3 ಅವರ ಹುಟ್ಟುಹಬ್ಬದ ಆಚರಣೆಯ ದಿನದಂದು ಏನು ಮಾಡಿದರು ಎಂಬುದನ್ನು ಪಟ್ಟಿ ಮಾಡುವುದು ಮತ್ತು ವಿವರಿಸುವುದು | 3 ಹಬ್ಬದ ದಿನದಂದು ಜನರಿಗೆ ಸೂಕ್ತವಾಗಿ ಶುಭಾಶಯ ಹೇಳುವುದು. | 3 ಹಬ್ಬಗಳು ಜನರು ಸಾಮಾಜಿಕ ಜೀವನದಲ್ಲಿ ಒಟ್ಟಿಗೆ ಸೇರಲು ಒಂದು ಮಾರ್ಗ ಎಂದು ಹಬ್ಬಗಳ ಮಹತ್ವವನ್ನು ತಿಳಿಸುವುದು |
| 4 ಮಗುವಿನ ಜೀವನದಲ್ಲಿನ ಪ್ರಮುಖ ಆಚರಣೆಗಳನ್ನು ಗುರುತಿಸುವುದು: ತನ್ನ ಮತ್ತು ಒಡಹುಟ್ಟಿದವರ ಹುಟ್ಟುಹಬ್ಬಗಳು, ಮದುವೆಗಳು ಮತ್ತು ನಾಮಕರಣದ ಸಮಾರಂಭಗಳು, ಪೂಜೆಗಳು, ವಿಜಯೋತ್ಸವಗಳು. | 4 ಹಬ್ಬಗಳು ಜನರು ಸಾಮಾಜಿಕ ಜೀವನದಲ್ಲಿ ಒಟ್ಟಿಗೆ ಸೇರಲು ಒಂದು ಮಾರ್ಗ ಎಂದು ಹಬ್ಬಗಳ ಮಹತ್ವವನ್ನು ತಿಳಿಸುವುದು. | 4 ನಿರ್ದಿಷ್ಟ ಪದಗಳನ್ನು ಮತ್ತು ಸಂಪೂರ್ಣ ವಾಕ್ಯಗಳನ್ನು ಬಳಸಿ, ನಿರ್ದಿಷ್ಟ ಹಬ್ಬಗಳಿಗೆ ಸಂಬಂಧಿಸಿದ ಘಟನೆ/ಸನ್ನಿವೇಶಗಳನ್ನು ವಿವರಿಸುವುದು. |
| | 5 ನಿರ್ದಿಷ್ಟ ಪದಗಳನ್ನು ಬಳಸಿಕೊಂಡು ನಿರ್ದಿಷ್ಟ ಹಬ್ಬಗಳಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುವುದು. | |

ಉಪವಿಷಯ 3.1

# ಆಚರಣೆಗಳು ಮತ್ತು ಹಬ್ಬಗಳು

## ಕಲಿಕಾ ಉದ್ದೇಶಗಳು

- ಅವರ ಸಮುದಾಯದಲ್ಲಿ ಆಚರಿಸುವ 3 ಪ್ರಮುಖ ಹಬ್ಬಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು.
- ಹಬ್ಬದ ಪ್ರಾಥಮಿಕ ಗುಣಲಕ್ಷಣಗಳು / ಘಟನೆ / ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು. ಉಲ್ಲೇಖದೊಂದಿಗೆ – ಧಾರ್ಮಿಕ ಹಬ್ಬಗಳ ಪ್ರಮುಖ ಭಾಗವಾಗಿ ಪ್ರಾರ್ಥನೆ, ವಿಶೇಷ ಆಹಾರಗಳು ಮತ್ತು ಬಟ್ಟೆಗಳು, ಸಭೆ ಮತ್ತು ಶುಭಾಶಯ.
- ಹಬ್ಬದ ದಿನದಂದು ಜನರಿಗೆ ಸೂಕ್ತವಾಗಿ ಶುಭಾಶಯ ಹೇಳುವುದು.
- ಹಬ್ಬಗಳು ಜನರು ಸಾಮಾಜಿಕ ಜೀವನದಲ್ಲಿ ಒಟ್ಟಿಗೆ ಸೇರಲು ಒಂದು ಮಾರ್ಗ ಎಂದು ಹಬ್ಬಗಳ ಮಹತ್ವವನ್ನು ತಿಳಿಸುವುದು.
- ನಿರ್ದಿಷ್ಟ ಪದಗಳನ್ನು ಬಳಸಿಕೊಂಡು ನಿರ್ದಿಷ್ಟ ಹಬ್ಬಗಳಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುವುದು.

ಸಂಭಾಷಣೆ 1

**ಆಚರಣೆಗಳು**



# ಆಚರಣೆಯ ದಿನವಾಗಿ ಹುಟ್ಟುಹಬ್ಬ

## ಕಲಿಕಾ ಫಲಿತಗಳು

ಅವರ ಜೀವನದಲ್ಲಿ ಹುಟ್ಟುಹಬ್ಬವು ಕೂಡ ಒಂದು ವಿಶೇಷ ದಿನ ಎಂದು ಅರ್ಥಮಾಡಿಕೊಳ್ಳುವುದು.

**ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.**

- ಆಚರಣೆಗಳು ಇತರೆ ದಿನಗಳಿಗಿಂತ ವಿಭಿನ್ನವಾಗಿವೆ ಮತ್ತು ಅಂದಿನ ದಿನ ವಿಭಿನ್ನವಾಗಿ ಏನು ಮಾಡುತ್ತಾರೆ. ಎಂಬುದನ್ನು ಅರ್ಥಮಾಡಿಕೊಳ್ಳುವುದು.
- ಮಗುವಿನ ಜೀವನದಲ್ಲಿನ ಪ್ರಮುಖ ಆಚರಣೆಗಳನ್ನು ಗುರುತಿಸುವುದು: ತನ್ನ ಮತ್ತು ಒಡಹುಟ್ಟಿದವರ ಹುಟ್ಟುಹಬ್ಬಗಳು.

**ಕಲಿಕಾ ಸಾಮಗ್ರಿಗಳು:** ಏನೂ ಇಲ್ಲ


## ಶಿಕ್ಷಕರ ಪೂರ್ವಸಿದ್ಧತೆ

- ಮೊದಲ ದಿನದಿಂದಲೇ ಮಕ್ಕಳ ಹುಟ್ಟುಹಬ್ಬದ ದಿನಗಳನ್ನು ಗುರುತಿಸಿ ಘೋಷಿಸಿ ಮತ್ತು ಇದು ಮಗುವಿಗೆ ವಿಶೇಷ ದಿನ ಎಂದು ಹೇಳಿ ಮತ್ತು ಇತರೆ ಮಕ್ಕಳಿಂದ ಆ ಮಗುವಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಹೇಳುವಂತೆ ತಿಳಿಸಿ.
- ಮಕ್ಕಳ ಹೆಸರುಗಳು ಮತ್ತು ಅವರ ಹುಟ್ಟುಹಬ್ಬದ ದಿನಾಂಕಗಳನ್ನು ಮೊದಲೆ ತಿಳಿದುಕೊಂಡಿರುವುದು. ವಿಶೇಷವಾಗಿ ಆ ತಿಂಗಳಲ್ಲಿ ಬರುವಂತಹ ಮಕ್ಕಳ ಹುಟ್ಟುಹಬ್ಬಗಳು.

## ಸೂಚನೆಗಳು

ಹಂತ 1: **ಹುಟ್ಟುಹಬ್ಬಗಳು**

1. ಮಗುವಿನ ಹುಟ್ಟುಹಬ್ಬದ ಮೊದಲು ಅಥವಾ ನಂತರದ ದಿನಗಳಲ್ಲಿ ಸಂಭಾಷಣೆಯನ್ನು ಪ್ರಾರಂಭಿಸಲು ಪ್ರಯತ್ನಿಸಿ. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಮಗುವಿಗೆ ಶುಭ ಹಾರೈಸುವಂತೆ ಮಕ್ಕಳನ್ನು ಕೇಳುವ ಮೂಲಕ ಪ್ರಾರಂಭಿಸುವುದು.
2. ಅನಂತರ ಹುಟ್ಟುಹಬ್ಬದ ಅರ್ಥ ಏನೆಂದು ನಿಮಗೆ ತಿಳಿದಿದೆಯೇ? ಎಂದು ಮಕ್ಕಳನ್ನು ಕೇಳುವ ಮೂಲಕ ಸಂಭಾಷಣೆಯನ್ನು ಮುಂದುವರೆಸಿ. ಈಗಾಗಲೇ ಐ.ಸಿ.ಡಿ.ಎಸ್ ಯಿಂದ ಬಂದಿರುವ ಮಕ್ಕಳಿಗೆ ಹೇಳಲು ಸಾಧ್ಯವಾಗಬಹುದು. ಆದರೆ ಎಲ್ಲಾ ಮಕ್ಕಳಿಗೆ ಉತ್ತರಿಸಲು ಅವಕಾಶ ನೀಡಿ. ಒಂದು ಹುಟ್ಟುಹಬ್ಬದಿಂದ ಮತ್ತೊಂದು ಹುಟ್ಟುಹಬ್ಬದ ದಿನಕ್ಕೂ ಏನಾಗುತ್ತದೆ ಎಂದು ಮಕ್ಕಳನ್ನು ಕೇಳಿ. ಅವರ ವಯಸ್ಸು ಮತ್ತು ಬೆಳವಣಿಗೆಗೆ ಹೊಂದಿಸಿ. ಒಂದು ಹುಟ್ಟುಹಬ್ಬದಿಂದ ಮತ್ತೊಂದು ಹುಟ್ಟುಹಬ್ಬದ ದಿನಕ್ಕೆ ಮಕ್ಕಳು ವಯಸ್ಸಿನಲ್ಲಿ ದೊಡ್ಡವರಾಗುತ್ತಾರೆ ಮತ್ತು ಬೆಳೆಯುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಪ್ರೋತ್ಸಾಹಿಸುವುದು.
3. ಆ ದಿನದ ವಿಶೇಷವೇನು ಮತ್ತು ಹುಟ್ಟುಹಬ್ಬದ ದಿನದಂದು ಅವರು ಯಾವುದೇ ವಿಶೇಷ ಕೆಲಸಗಳನ್ನು ಮಾಡಿದ್ದಾರೆಯೇ ಎಂದು ಅವರನ್ನು ಕೇಳಿ. (ಕೆಲವು ಮಕ್ಕಳಿಗೆ ಈ ದಿನವು ಇತರೆ ದಿನದಂತೆಯೇ ಇದೆ ಎಂಬುದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿ. ಆದ್ದರಿಂದ ಮಕ್ಕಳು ಉತ್ತರಿಸದಿದ್ದರೆ ಅವರನ್ನು ಹೇಳುವಂತೆ ಒತ್ತಾಯಿಸಬೇಡಿ.) ಹುಟ್ಟುಹಬ್ಬವು ಪ್ರತೀ ವರ್ಷ ಬರುತ್ತದೆ ಮತ್ತು ಅದು ಆ ಮಗುವಿನ ಜೀವನದಲ್ಲಿ ಒಂದು ವಿಶೇಷ ದಿನವಾಗಿರುತ್ತದೆ ಎಂದು ವಿವರಿಸುವುದರ ಮೂಲಕ ಸಂಭಾಷಣೆಯನ್ನು ಸಂಪೂರ್ಣಗೊಳಿಸುವುದು.
4. ಎಲ್ಲಾ ಮಕ್ಕಳ ಹುಟ್ಟುಹಬ್ಬದ ದಿನಗಳನ್ನು ನೀವು ನೆನಪಿನಲ್ಲಿಟ್ಟುಕೊಳ್ಳುವುದು/ಗಮನದಲ್ಲಿಟ್ಟುಕೊಂಡಿರುವಿರಾ ಎಂಬುದನ್ನು ಖಚಿತಪಡಿಸಿಕೊಳ್ಳಿ ಮತ್ತು ಆ ದಿನದಂದು ಅವರಿಗೆ ವಿಶೇಷ ಭಾವನೆ ಮೂಡುವಂತೆ ಮಾಡುವುದು.



**ಹಂತ 1: ಹಬ್ಬಗಳು ಒಂದು ಆಚರಣೆಯ ದಿನವಾಗಿ**

## ಕಲಿಕಾ ಫಲಿತಗಳು

- ಸಮುದಾಯದಲ್ಲಿನ ಪ್ರಮುಖ ಹಬ್ಬಗಳ ದಿನಗಳನ್ನು ಗುರುತಿಸುವುದು.
- ಹಬ್ಬದ ಪ್ರಾಥಮಿಕ ಗುಣಲಕ್ಷಣಗಳು/ ಘಟನೆ/ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು. ಉಲ್ಲೇಖದೊಂದಿಗೆ– ಧಾರ್ಮಿಕ ಹಬ್ಬಗಳ ಪ್ರಮುಖ ಭಾಗವಾಗಿ ಪ್ರಾರ್ಥನೆ, ವಿಶೇಷ ಆಹಾರಗಳು ಮತ್ತು ಬಟ್ಟೆಗಳು, ಸಭೆ ಮತ್ತು ಶುಭಾಶಯ.

**ಕಲಿಕಾ ಸಾಮಗ್ರಿಗಳು:** ಏನೂ ಇಲ್ಲ

## ಶಿಕ್ಷಕರ ಪೂರ್ವಸಿದ್ಧತೆ

ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

## ಸೂಚನೆಗಳು

1. ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಎಲ್ಲಾ ಮಕ್ಕಳು ಪರಸ್ಪರ ನೋಡಬಹುದು ಎಂದು ಖಚಿತಪಡಿಸಿಕೊಳ್ಳಿ. ಇತ್ತೀಚೆಗೆ ನಡೆದ ಯಾವುದಾದರೊಂದು ಹಬ್ಬದ ಬಗ್ಗೆ ಮಕ್ಕಳ ಗಮನವನ್ನು ಸೆಳೆಯುವ ಮೂಲಕ ಸಂಭಾಷಣೆಯನ್ನು ಪ್ರಾರಂಭಿಸುವುದು.
2. ಒಂದು ಹಬ್ಬವು ಸಮೀಪಿಸುತ್ತಿದ್ದರೆ ಅಥವಾ ಈಗಾಗಲೇ ಮುಗಿದಿದ್ದರೆ, ಆ ನಿರ್ದಿಷ್ಟ ಘಟನೆಯ ಬಗ್ಗೆ ಕೇಳುವ ಮೂಲಕ ಮಕ್ಕಳೊಂದಿಗೆ ಸಂಭಾಷಣೆಯನ್ನು ಪ್ರಾರಂಭಿಸಿ. "ಇತ್ತೀಚೆಗೆ ನಾವೆಲ್ಲರೂ ಹಬ್ಬವನ್ನು ಆಚರಿಸಿದ್ದೇವೆ. ಅದು ಯಾವ ಹಬ್ಬವೆಂದು ನಿಮಗೆ ನೆನಪಿದೆಯೇ? ಅಥವಾ ಶೀಘ್ರದಲ್ಲೇ ಹಬ್ಬ ಬರಲಿದೆ. ಅದು ಯಾವುದು ಎಂದು ಯಾರಾದರು ಹೆಸರಿಸುವಿರಾ?" ಎಂದು ಕೇಳುವುದು.
3. ಇತರೆ ಎಲ್ಲಾ ದಿನಗಳಿಗಿಂತ ಈ ದಿನವು ಏಕೆ ಭಿನ್ನವಾಗಿದೆ ಎಂದು ಅವರು ಏಕೆ ಭಾವಿಸುತ್ತಾರೆ ಎಂಬ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ. ವಿಶೇಷವಾಗಿ ಏನು ಮಾಡುತ್ತಾರೆ? ಮಕ್ಕಳಿಗೆ ಯೋಚಿಸಲು ಮತ್ತು ಉತ್ತರಿಸಲು ಅವಕಾಶ ಮಾಡಿಕೊಡುವುದು.
4. ಹಬ್ಬದ ಬಗ್ಗೆ ತಮ್ಮ ಮಾತೃಭಾಷೆ/ಆಡುಭಾಷೆಯಲ್ಲಿ ಮಾತನಾಡಲು ಮಕ್ಕಳನ್ನು ಪ್ರೋತ್ಸಾಹಿಸುವುದು. ಉದಾ: ಕನ್ನಡ, ತೆಲುಗು, ಉರ್ದು ಇತ್ಯಾದಿ.
5. ಒಮ್ಮೆ ಮಕ್ಕಳಿಗೆ ಉತ್ತರಿಸಲು ಅವಕಾಶ ಸಿಕ್ಕಿದ ನಂತರ, ಆಹಾರ, ಬಟ್ಟೆ ಮತ್ತು ಆಚರಣೆಗಳ ಬಗ್ಗೆ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಕೇಳುವುದು.
6. ಆಚರಣೆಗಳು ಅವರ ಹುಟ್ಟುಹಬ್ಬದ ದಿನದಂದು ಅವರು ಮಾಡುವ ಕೆಲಸಗಳಿಗಿಂತ ಬಹಳ ಭಿನ್ನವಾಗಿದೆಯೇ? ಒಂದೇ ತರಹವಾಗಿರುವುದು ಏನಿದೆ? ವಿಭಿನ್ನವಾಗಿ ಏನಿದೆ? ಹಬ್ಬಗಳು ಅವರಿಗೆ ಹೇಗೆ ಅನಿಸುತ್ತವೆ ಎಂಬುದರ ಬಗ್ಗೆ ಮಾತನಾಡಲು ಮಕ್ಕಳಿಗೆ ತಿಳಿಸುವುದು.
7. ಮಕ್ಕಳು ಮಾತನಾಡಿದ ಪ್ರಮುಖ ಅಂಶಗಳನ್ನು ಸಂಕ್ಷಿಪ್ತಗೊಳಿಸುವ ಮೂಲಕ ಸಂಭಾಷಣೆಯನ್ನು ಪೂರ್ಣಗೊಳಿಸುವುದು.

ಸಂಭಾಷಣೆ 2

## ನಮ್ಮ ಕೆಲವು ಹಬ್ಬಗಳು

### ಕಲಿಕಾ ಫಲಿತಗಳು

**ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.**

- ಅವರ ಸಮುದಾಯದಲ್ಲಿನ 3 ಪ್ರಮುಖ ಹಬ್ಬಗಳನ್ನು ಗುರುತಿಸಲು ಮತ್ತು ಹೆಸರಿಸಲು ಸಾಧ್ಯವಾಗುತ್ತದೆ.
- ಸಂಪೂರ್ಣ ವಾಕ್ಯಗಳಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿಕೊಂಡು ನಿರ್ದಿಷ್ಟ ಹಬ್ಬಗಳಿಗೆ ಸಂಬಂಧಿಸಿದ ಘಟನೆ/ಸನ್ನಿವೇಶಗಳನ್ನು ವಿವರಿಸುವುದು.

### ಶಿಕ್ಷಕರ ಪೂರ್ವಸಿದ್ಧತೆ

ಸಂಭಾಷಣಾ ಚಾರ್ಟ್ **P3.1.2–1,** ಕ್ರಯಾನ್ಸ್, ಚಿತ್ರಿಸಲು ಚಾರ್ಟ್‌ಪೇಪರ್.

### ಶಿಕ್ಷಕರ ಪೂರ್ವಸಿದ್ಧತೆ

- ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.
- ಸಂಭಾಷಣಾ ಚಾರ್ಟ್‌ನ್ನು ಸಿದ್ಧವಾಗಿಟ್ಟುಕೊಳ್ಳುವುದು.



# ನಮ್ಮ ಕೆಲವು ಹಬ್ಬಗಳು



## ಸೂಚನೆಗಳು

1. ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಎಲ್ಲಾ ಮಕ್ಕಳು ಪರಸ್ಪರ ನೋಡಬಹುದು ಎಂದು ಖಚಿತಪಡಿಸಿಕೊಳ್ಳುವುದು.
   - ಸಂಭಾಷಣಾ ಚಾರ್ಟ್‌ಲ್ಲಿ ಎಡದಿಂದ ಮೊದಲನೆಯ ಚಿತ್ರವನ್ನು ತೋರಿಸುವುದು.
   - ಮಕ್ಕಳಿಗೆ ಚಿತ್ರವನ್ನು ನೋಡಲು ಹೇಳಿ ಮತ್ತು ಚಿತ್ರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ವಿವರಿಸುವಂತೆ ಮಕ್ಕಳನ್ನು ಕೇಳುವುದು. [ನಿಮಗೆ ಸುಲಭವಾಗಿದ್ದರೆ, ನೀವು ಚಾರ್ಟ್‌ಲ್ಲಿರುವ ಇತರೆ 2 ಭಾಗಗಳನ್ನು ಕಾಗದದ ಚೂರುಗಳಿಂದ ಮುಚ್ಚಬಹುದು]
   - ಜನರು ಏನು ಮಾಡುತ್ತಿದ್ದಾರೆ? ವೃತ್ತದ ಸುತ್ತಲೂ ಹೋಗಿ ಚಿತ್ರದಲ್ಲಿ ಚಿತ್ರಿಸಿರುವ ವಿವಿಧ ವಿಷಯಗಳ ಬಗ್ಗೆ ಮಾತನಾಡಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು. ಪೂರ್ತಿ ಸುತ್ತು ಮುಗಿದ ನಂತರ, ಮಕ್ಕಳು ವಿವರಿಸಿರುವ ಅಥವಾ ಉಲ್ಲೇಖಿಸಿರುವ ಕೆಲವು ಘಟನೆ/ಸನ್ನಿವೇಶಗಳನ್ನು ಸೂಚಿಸಿ ಮತ್ತು ಅವುಗಳನ್ನು ವಿವರಿಸಿ. ಚಿತ್ರದಲ್ಲಿ ಜನರು ಹಬ್ಬವನ್ನು ಆಚರಿಸುತ್ತಿದ್ದಾರೆಯೇ. ಅದು ಯಾವ ಹಬ್ಬ ಎಂದು ಅವರಿಗೆ ತಿಳಿದಿದೆಯೇ? ಚಿತ್ರದಲ್ಲಿ ಆ ಹಬ್ಬವನ್ನು ಏನೆಂದು ಕರೆಯಲಾಗುತ್ತದೆ? ಎಂದು ಕೇಳುವುದು.
   - ದೀಪಾವಳಿ ಹಬ್ಬದ ದಿನದಂದು ಅವರು ಏನು ಮಾಡುತ್ತಾರೆ? ಎಂಬುದರ ಬಗ್ಗೆ ಮಕ್ಕಳಿಗೆ ಮಾತನಾಡಲು ಅವಕಾಶ ಮಾಡಿಕೊಡುವುದು.
   - ದೀಪಾವಳಿಯ ಆಚರಣೆಗಳು ಮತ್ತು ನಿಯಮಗಳ ಬಗ್ಗೆ ಸರಿಯಾದ ಪದಗಳನ್ನು ಬಳಕೆ ಮಾಡುವಂತೆ ಪ್ರೋತ್ಸಾಹಿಸುವುದು.
2. ಮಧ್ಯದ ಮತ್ತು ಕೊನೆಯ ಚಿತ್ರದ ಬಗ್ಗೆ ಇದೇ ಪ್ರಕ್ರಿಯೆಯನ್ನು ಪುನರಾವರ್ತಿಸುವುದು – ರಮ್ಜಾನ್, ಈದ್ ಉಲ್ ಝುವಾ. ಮತ್ತು ಕ್ರಿಸ್‌ಮಸ್. (ನಿಮ್ಮ ತರಗತಿಯಲ್ಲಿ ಈ 2 ಅಲ್ಪಸಂಖ್ಯಾತ ಧರ್ಮಗಳಿಂದ ಕೂಡಿದ ಮಕ್ಕಳು ಇಲ್ಲದಿರಬಹುದು ಮತ್ತು ಕ್ರಿಸ್‌ಮಸ್ ಮರಗಳು, ಇತ್ಯಾದಿ ಪರಿಕಲ್ಪನೆಯು ಅವರಿಗೆ ಸಂಪೂರ್ಣವಾಗಿ ಭಿನ್ನ/ಅಸಮಂಜಸ ಎಂದೆನಿಸಬಹುದು. ಅವರು ನೋಡುವುದಕ್ಕಿಂತ ಹೆಚ್ಚಿನ ಮಾಹಿತಿಯನ್ನು ಅವರು ನಿಮಗೆ ನೀಡದಿರಬಹುದು).
3. ಚಿತ್ರಗಳಲ್ಲಿ ಎಲ್ಲಾ ಜನರು ಒಂದೇ ತರಹದ ಕೆಲಸಗಳನ್ನು ಮಾಡುತ್ತಿದ್ದಾರೆಯೇ? ಉದಾ: ಪ್ರಾರ್ಥನೆಗಳು, ಹೊಸ/ಉತ್ತಮ ಬಟ್ಟೆಗಳನ್ನು ಧರಿಸಿರುವುದು, ವಿಶೇಷ ಆಹಾರಗಳು, ಜನರು ಪರಸ್ಪರ ಶುಭಾಶಯ ಕೋರುವುದು ಇತ್ಯಾದಿ. ಈ ಕೆಲವು ಅಂಶಗಳನ್ನು, ಎಲ್ಲಾ ಜನರು ಹಬ್ಬಗಳಲ್ಲಿ ಮಾಡುತ್ತಾರೆ ಮತ್ತು ಅದು ಅವರಿಗೆ ವಿಶೇಷವಾಗಿದೆ. ಎಂದು ತಿಳಿಸುವುದು.
4. ಚಿತ್ರಗಳಲ್ಲಿರುವ ಜನರ ಭಾವನೆ ಹೇಗಿದೆ? ಅವರು ಸಂತೋಷದಿಂದ ಕಾಣುತ್ತಿದ್ದಾರೆಯೇ? ಮಕ್ಕಳು ಸಂತೋಷದಿಂದ ಇದ್ದಾರೆಯೇ? ಎಂದು ವಿವರಿಸಲು ಮಕ್ಕಳನ್ನು ಕೇಳಿ. ಜನರು ಸಂತೋಷವಾಗಿರುವಾಗ ಹಬ್ಬಗಳು ಒಂದು ಆಚರಣೆಯ ದಿನವಾಗಿರುತ್ತದೆ ಎಂದು ಒತ್ತಿ ಹೇಳುವುದು.
5. ಕೆಲವು ಹೊಸ ಪದಗಳ ಪರಿಚಯ – ದೀಪಾವಳಿ, ರಮ್ಜಾನ್, ಕ್ರಿಸ್‌ಮಸ್, ದೀಪಗಳು, ಚರ್ಚ್, ಮಸೀದಿ, ದೇವಸ್ಥಾನಗಳು, ಪ್ರಾರ್ಥನೆಗಳು, ಹೊಸ ಬಟ್ಟೆಗಳು/ಉಡುಪುಗಳು, ಸಿಹಿತಿಂಡಿಗಳು, ಇತ್ಯಾದಿ.

ಸಂಭಾಷಣೆ 3

## ವಿಶೇಷ ಹಬ್ಬಗಳಲ್ಲಿ ನಾನು ಜನರಿಗೆ ಹೇಗೆ ಶುಭಾಶಯ ಹೇಳಬೇಕು


### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಹಬ್ಬದ ದಿನದಂದು ಜನರಿಗೆ ಸೂಕ್ತವಾಗಿ ಶುಭಾಶಯ ಕೋರುವುದು ಹೇಗೆ ಎಂಬುದು.
- ಹಬ್ಬಗಳು ಜನರು ಸಾಮಾಜಿಕ ಜೀವನದಲ್ಲಿ ಒಟ್ಟಿಗೆ ಸೇರಲು ಒಂದು ಮಾರ್ಗ ಎಂದು ಹಬ್ಬಗಳ ಮಹತ್ವವನ್ನು ತಿಳಿಸುವುದು.

### ಕಲಿಕಾ ಸಾಮಗ್ರಿಗಳು

ಸಂಭಾಷಣಾ ಚಾರ್ಟ್, (3.1.3–1)




### ಶಿಕ್ಷಕರ ಪೂರ್ವಸಿದ್ಧತೆ

- ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.
- ಸಂಭಾಷಣಾ ಚಾರ್ಟ್‌ನ್ನು ಸಿದ್ಧವಾಗಿಟ್ಟುಕೊಳ್ಳುವುದು. (ಹಬ್ಬಗಳು)

### ಸೂಚನೆಗಳು

1. ಹಿಂದೆ ನಡೆದ ಹಬ್ಬಗಳ ಬಗೆಗಿನ ಚರ್ಚೆಯನ್ನು ಪುನರಾವರ್ತಿಸುವುದು.
2. ಈ ಹಬ್ಬಗಳಂತಹ ಸಂತೋಷದ ಸಂದರ್ಭಗಳನ್ನು ಜನರು ಆಚರಿಸುವ ವಿಭಿನ್ನ ವಿಧಾನಗಳನ್ನು ಗುರುತಿಸಲು ಮಕ್ಕಳಿಗೆ ಸಹಾಯ ಮಾಡುವುದು.
3. ಹಬ್ಬದ ಸಮಯದಲ್ಲಿ ಪರಸ್ಪರ ಶುಭಾಶಯಗಳನ್ನು ತಿಳಿಸುವುದು ಹೇಗೆ ಎಂದು ಮಕ್ಕಳಿಗೆ ತಿಳಿದಿದೆಯೇ ಎಂದು ಕೇಳಿ ತಿಳಿಸಿಕೊಡುವುದು.
4. ಶುಭಾಶಯಗಳನ್ನು ಪ್ರಮುಖವಾಗಿಸಲು ಸಂಭಾಷಣಾ ಚಾರ್ಟ್‌ನ್ನು ಬಳಸುವುದು.
5. ಪ್ರತೀ ಹಬ್ಬಕ್ಕೂ ಶುಭಾಶಯ ಕೋರುವ ಕ್ರಿಯೆಯನ್ನು ರೂಪಿಸಿ. ಮತ್ತು ಪ್ರತೀ ಮಕ್ಕಳು ಒಬ್ಬರ ನಂತರ ಒಬ್ಬರು ಅದೇ ತರಹ ನಟಿಸುವಂತೆ ಹೇಳುವುದು.
   - ದೀಪಾವಳಿ – 2 ಅಂಗೈಗಳನ್ನು ಜೋಡಿಸಿ ನಮಸ್ಕರಿಸಿ ಮತ್ತು ಶುಭಾಶಯ ತಿಳಿಸಿ – ದೀಪಾವಳಿಯ ಶುಭಾಶಯಗಳು, ಹ್ಯಾಪಿ ದೀಪಾವಳಿ, ಎಂದು ಹೇಳಿ.
   - ಬಕ್ರಿದ್ – ಅಪ್ಪಿಕೊಳ್ಳಿ ಮತ್ತು ಈದ್ ಮುಬಾರಕ್ ಎಂದು ಹೇಳಿ.
   - ಕ್ರಿಸ್‌ಮಸ್ – ಕೈಕುಲುಕಿ ಮೇರಿ ಕ್ರಿಸ್‌ಮಸ್ ಎಂದು ಹೇಳಿ.
6. ಜನರು ಹಬ್ಬಗಳನ್ನು ಆಚರಿಸುವ ವಿಭಿನ್ನ ವಿಧಾನಗಳನ್ನು ಮತ್ತು ಅದರಲ್ಲಿ ಭಾಗವಹಿಸುವುದು ಎಷ್ಟು ಸಂತೋಷದಾಯಕವಾಗಿದೆ ಎಂಬುದನ್ನು ತಿಳಿಸುವ ಮೂಲಕ ಚರ್ಚೆಯನ್ನು ಮುಕ್ತಾಯಗೊಳಿಸುವುದು.

### ಯೋಜನಾ ಕಾರ್ಯ 1


## ಚಿತ್ರ ಬಿಡಿಸಿ ಬಣ್ಣ ತುಂಬುವುದು


ಹಬ್ಬದ ದಿನಗಳಲ್ಲಿ ತಯಾರಿಸಿದ ವಿಶೇಷ ಆಹಾರ ಪದಾರ್ಥಗಳನ್ನು ಚಿತ್ರಿಸಲು ಮತ್ತು ಬಣ್ಣತುಂಬಲು ಮಕ್ಕಳಿಗೆ ಹೇಳಿ. ಉದಾ: ಸಿಹಿತಿಂಡಿಗಳು (ಕಡುಬು, ಕಜ್ಜಾಯ, ಉಂಡೆ, ಕೇಕ್. ಇತ್ಯಾದಿ)


### ಯೋಜನಾ ಕಾರ್ಯ 2


## ನೆಲದ ಮೇಲೆ ಸರಳ ರಂಗೋಲಿಗಳನ್ನು ಬಿಡಿಸುವುದು

1. ಶಿಕ್ಷಕಿ ನೆಲದ ಮೇಲೆ ಸರಳವಾದ ರಂಗೋಲಿಗಳನ್ನು ಬಿಡಿಸುವುದು ಮತ್ತು ಮಕ್ಕಳಿಗೆ ರಂಗೋಲಿಯ ಒಳಭಾಗದಲ್ಲಿ ಬಣ್ಣಗಳನ್ನು ತುಂಬಲು ಹೇಳುವುದು. (ಬಣ್ಣದ ಸೀಮೆಸುಣ್ಣ/ಬಣ್ಣಗಳ ರಂಗೋಲಿ ಪುಡಿ)
2. ಶಿಕ್ಷಕಿ ನೆಲದ ಮೇಲೆ ಸರಳವಾದ ಚುಕ್ಕಿಗಳಿಂದ ಕೂಡಿದ ರಂಗೋಲಿಗಳನ್ನು ಬಿಡಿಸುವುದು ಮತ್ತು ಮಕ್ಕಳಿಗೆ ಸೀಮೆಸುಣ್ಣದಿಂದ ಚುಕ್ಕಿಗಳನ್ನು ಸೇರಿಸಲು ಹೇಳುವುದು ಮತ್ತು ರಂಗೋಲಿಯ ಒಳಭಾಗದಲ್ಲಿ ವಿವಿಧ ಗುಂಡಿಗಳು, ಮಣಿಗಳು, ಮತ್ತು ಹೂಗಳ ದಳಗಳಿಂದ ರಂಗೋಲಿಯನ್ನು ವಿನ್ಯಾಸಗೊಳಿಸುವಂತೆ ಹೇಳುವುದು.









## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

ಈ ಕೆಳಗಿನ ಶಿಶುಗೀತೆಗಳನ್ನು ಸರಿಯಾದ ಪದಗಳು, ಸರಿಯಾದ ಉಚ್ಚಾರಣೆ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವುದು.

**ಗಮನಿಸಿ:** ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ಹಬ್ಬ, ಜಾತ್ರೆ, ಆಚರಣೆಗಳು' ಈ ಮುಖ್ಯ ವಿಷಯ ಮುಗಿಯುವವರೆಗೂ ಇದನ್ನು ಪುನರಾವರ್ತಿಸುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವ ಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಸಚಿತ್ರವಾಗಿ ಶಿಶುಗೀತೆಯನ್ನು ಬರೆದು ಮತ್ತು ಮಕ್ಕಳಿಗೆ ಕಾಣುವಂತೆ ಕಣ್ಣಿನ ಎತ್ತರಕ್ಕೆ ಸರಿಹೊಂದುವಂತೆ ಒಂದು ಮೂಲೆಯಲ್ಲಿ ಪ್ರದರ್ಶಿಸಿ. ಮಕ್ಕಳು ಶಿಶುಗೀತೆಯನ್ನು ನೋಡಲು ಅವಕಾಶ ಮಾಡಿಕೊಡುವುದು.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಆಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಮಕ್ಕಳಿಗೆ ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

ಶಿಶುಗೀತೆ 1

## ಹಬ್ಬದ ಸಡಗರ

# ಹಬ್ಬದ ಸಡಗರ

ಹಬ್ಬ ಬಂತು ಹಬ್ಬ
ತುಂಬಿತು ಬೆಲ್ಲದ ಡಬ್ಬ
ಮನೆಗೆ ಹಸಿರು ತೋರಣ
ಒಳಗೆ ಉಂಟು ಔತಣ
||ಹಬ್ಬ ಬಂತು||



ಜಿಲೇಬಿ ಲಾಡು ರವೆಉಂಡೆ
ಪಾಯಸ ತುಂಬಿದ ಹಂಡೆ
ಅನ್ನ ಹೋಳಿಗೆ ಸಾರು
ಹಪ್ಪಳ ಸಂಡಿಗೆ ಮೊಸರು
ಊಟದ ನಂತರ ಆಟ
ಮರೆತೇ ಬಿಟ್ಟೆವು ಪಾಠ
||ಹಬ್ಬ ಬಂತು||





**ಶಿಶುಗೀತೆ 2**

## ಆಸೆ

# ಆಸೆ

ಸಂಕ್ರಾಂತಿ ಹಬ್ಬ ಬಂದಾಗ
ಎಳ್ಳು ಬೆಲ್ಲ ಹಂಚುವ ಆಸೆ
ಶಿವರಾತ್ರಿ ಹಬ್ಬ ಬಂದಾಗ
ಜಾಗರಣೆ ಮಾಡುವ ಆಸೆ
ಯುಗಾದಿ ಹಬ್ಬ ಬಂದಾಗ
ಬೇವು ಬೆಲ್ಲ ತಿನ್ನುವ ಆಸೆ
ಗೌರಿ ಹಬ್ಬ ಬಂದಾಗ
ಬಳೆ ತೊಡುವ ಆಸೆ
ಗಣೇಶ ಚೌತಿ ಬಂದಾಗ
ಕಡುಬು ತಿನ್ನುವ ಆಸೆ
ವಿಜಯದಶಮಿ ಬಂದಾಗ
ದಸರ ನೋಡುವ ಆಸೆ
ದೀಪಾವಳಿ ಹಬ್ಬ ಬಂದಾಗ
ಪಟಾಕಿ ಹೊಡೆಯುವ ಆಸೆ









ಶಿಶುಗೀತೆ 3

# Happy Birthday

## HAPPY BIRTHDAY

Happy birthday to you
Happy birthday to you
Happy birthday to you dear ________
Happy birthday to you

Happy long life to you
Happy long life to you
Happy long life to you dear ________
Happy long life to you



## ಅಲಿಯ ಈದ್



### ಕಲಿಕಾ ಫಲಿತಗಳು

ಕಥೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ನೆನಪಿಸಿಕೊಳ್ಳುವಂತಹ ಮತ್ತು ತರ್ಕಿಸುವಂತಹ ಸರಳವಾದ "ಏನು, ಏಕೆ ಮತ್ತು ಯಾವಾಗ" ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ಕಥೆಯನ್ನು ಸರಳವಾದ ವಾಕ್ಯಗಳಲ್ಲಿ ಪುನರಾವರ್ತಿಸುವುದು.

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

### ಕಥೆಯ ಸಂಕ್ಷಿಪ್ತ ರೂಪ

**ಅಲಿಯ ಈದ್**

ಈದ್ ಅಲ್–ಫಿತರ್ ಬಹಳ ಮುಖ್ಯವಾದ ಮುಸ್ಲಿಂಮರ ಆಚರಣೆಯಾಗಿದೆ. ಇದು ಅಲಿಯನ ನೆಚ್ಚಿನ ಸಮಯ. ಇದು ರಂಜಾನ್ ಕೊನೆಯಲ್ಲಿ ನಡೆಯುತ್ತದೆ. ಅಂದು ಜನರು ಹೊಸ ಬಟ್ಟೆಗಳನ್ನು ಧರಿಸುತ್ತಾರೆ ಮತ್ತು ತಮ್ಮ ಮನೆಗಳನ್ನು ದೀಪಗಳಿಂದ ಮತ್ತು ಅಲಂಕಾರಿಕ ವಸ್ತುಗಳಿಂದ ಸಿಂಗರಿಸುತ್ತಾರೆ. ಮಸೀದಿಗಳಿಗೆ ಹೋಗಿ ಎಲ್ಲರೂ ಪ್ರಾರ್ಥನೆ ಸಲ್ಲಿಸುತ್ತಾರೆ. ಅನೇಕ ಬೀದಿಗಳಲ್ಲಿ ಉರ್ಸ್ ಇರುತ್ತದೆ, ಅಲ್ಲಿ ಸಂಗೀತ, ನೃತ್ಯ, ಮತ್ತು ಮಕ್ಕಳು ಆಡುವಂತಹ ಆಟಗಳಿರುತ್ತವೆ. ಮಕ್ಕಳಿಗೆ ಉಡುಗೊರೆಗಳು ಸಿಗುವುದಿಲ್ಲ ಆದರೆ ಅವರಿಗೆ ಹಣ ಸಿಗುತ್ತದೆ. ಉರ್ಸ್‌ನಲ್ಲಿ ಸಿಹಿತಿಂಡಿಗಾಗಿ ತನ್ನ ಹಣವನ್ನು ಖರ್ಚು ಮಾಡಲು ಅಲಿ ಇಷ್ಟಪಡುತ್ತಾನೆ.





## ಸೂಚನೆಗಳು

**ಹಂತ 1:** ಕಥೆಯನ್ನು ಪರಿಚಯಿಸಿ: ವಿಷಯದ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು, ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು ಮತ್ತು ಕೆಲವು ಚರ್ಚೆಯೊಂದಿಗೆ ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು.

**ಹಂತ 2:** ಮುಖದ ಹಾವಭಾವ ಮತ್ತು ಧ್ವನಿಯ ಏರಿಳಿತಗಳನ್ನು ಬಳಸಿ ನಿಮ್ಮದೇ ವಾಕ್ಯಗಳಲ್ಲಿ ಕಥೆಯನ್ನು ಹೇಳುವುದು.

**ಹಂತ 3:** ಕಥೆಯಲ್ಲಿರುವ ಪ್ರಮುಖ ಪಾತ್ರಗಳು ಮತ್ತು ಸನ್ನಿವೇಶಗಳ ಕಡೆ ಗಮನ ಸೆಳೆಯುವುದು. ಕಥೆಯನ್ನು ಓದುತ್ತಾ ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ, ಅದಕ್ಕೆ ಸಂಬಂಧಿಸಿದ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು.

ಉದಾಹರಣೆ:

- ಈದ್ ಅಲ್–ಫಿತರ್ ಬಹಳ ಮುಖ್ಯವಾದ ಮುಸ್ಲಿಮ್ ಆಚರಣೆಯಾಗಿದೆ – ಯಾವುದು ಮುಖ್ಯವಾದ ಹಬ್ಬ?
- ಮಸೀದಿಗಳಿಗೆ ಹೋಗಿ ಎಲ್ಲರೂ ಪ್ರಾರ್ಥನೆ ಸಲ್ಲಿಸುತ್ತಾರೆ – ಎಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ?
- ಮಕ್ಕಳಿಗೆ ಉಡುಗೊರೆಗಳು ಸಿಗುವುದಿಲ್ಲ ಆದರೆ ಅವರಿಗೆ ಹಣ ಸಿಗುತ್ತದೆ – ಮಕ್ಕಳಿಗೆ ಏನು ಸಿಗುತ್ತದೆ?

**ಹಂತ 4:** ಕಥೆಯ ಕೊನೆಯಲ್ಲಿ ಮಕ್ಕಳಿಗೆ ಸರಳವಾದ ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳು ಉದಾಹರಣೆ:

- ಕಥೆಯಲ್ಲಿ ಹುಡುಗನ ಹೆಸರೇನು?
- ಹಬ್ಬದ ಹೆಸರೇನು?
- ಈದ್ ಸಮಯದಲ್ಲಿ ನೀವು ಏನೇನು ನೋಡಿದಿರಿ?
- ಅಲಿ ತನ್ನ ಹಣವನ್ನು ಯಾವುದಕ್ಕೆ ಖರ್ಚು ಮಾಡಲು ಇಷ್ಟಪಡುತ್ತಾನೆ?
- ಈದ್ ಆಚರಿಸುವುದು ಯಾವಾಗ?

**ಹಂತ 5:** ಕಥೆಯ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳಿ ಮತ್ತು ಕಥೆಯ ಪ್ರಮುಖ ವಿಚಾರಗಳ ಕುರಿತು ಚರ್ಚಿಸಿ. ತಾರ್ಕಿಕ ಪ್ರಶ್ನೆಗಳನ್ನು ಕೇಳಿ. ಉದಾ:

- ನಿಮಗೆ ಉಡುಗೊರೆ ಹಣವನ್ನು ನೀಡಿದರೆ ನೀವು ಏನು ಮಾಡಲು ಬಯಸುತ್ತೀರಿ?
- ಯರಾದರೂ ಈದ್ ಆಚರಿಸುವುದನ್ನು ನೀವು ನೋಡಿದ್ದೀರಾ? ಅಲ್ಲಿ ನೀವು ಏನು? ಏನು ನೋಡಿದ್ದೀರಿ?

**ಹಂತ 6:** ಕಥೆಯ ಪಾತ್ರಗಳೊಂದಿಗೆ ಮಕ್ಕಳು ಇತರರ ಭಾವನೆ ಮತ್ತು ಅನುಭವಗಳನ್ನು ಹೊಂದಲು ಅಗತ್ಯವಿರುವ ಸರಳ ಪ್ರಶ್ನೆಗಳನ್ನು ಕೇಳಿ.

- ಈದ್ ಹತ್ತಿರ ಬಂದಾಗ ಅಲಿ ಹೇಗೆ ಭಾವಿಸುತ್ತಾನೆ ಎಂದು ನೀವು ಭಾವಿಸುತ್ತೀರಿ?

**ಹಂತ 7:** 2–4 ವಾಕ್ಯಗಳಲ್ಲಿ ಕಥೆಯನ್ನು ತಮ್ಮದೇ ಮಾತುಗಳಲ್ಲಿ ನಿರೂಪಿಸಲು ಮಕ್ಕಳಿಗೆ ಸಹಾಯ ಮಾಡುವುದು.

**ಚಟುವಟಿಕೆ 1**

## ಕ್ರಿಸ್‌ಮಸ್ ಮರ

### ಕಲಿಕಾ ಫಲಿತಗಳು

- ಸಣ್ಣ ಸ್ನಾಯುಗಳ ಬೆಳವಣಿಗೆ ಮತ್ತು ಅಭಿವೃದ್ಧಿ
- ಹಬ್ಬಗಳಿಗೆ ಸಂಬಂಧಿಸಿದ ವಸ್ತುಗಳ ಸೃಜನಾತ್ಮಕ ಚಿತ್ರಣ



### ಕಲಿಕಾ ಸಾಮಗ್ರಿಗಳು

ಚಾರ್ಟ್‌ಪೇಪರ್, ಕ್ರಯಾನ್ಸ್‌ಗಳು, ಬಣ್ಣಗಳು

### ಸೂಚನೆಗಳು

1. ಶಿಕ್ಷಕಿ ಎಲ್ಲಾ ಮಕ್ಕಳಿಗೆ ಸಾಕಾಗುವಷ್ಟು ಬಣ್ಣವಿದೆಯಾ ಎಂದು ಖಚಿತಪಡಿಸಿಕೊಳ್ಳುವುದು.
2. ಮಕ್ಕಳಿಗೆ ತಮ್ಮ ಅಂಗೈಯನ್ನು ಪೂರ್ತಿಯಾಗಿ ಬಣ್ಣದಲ್ಲಿ ಅದ್ದುವಂತೆ ಹೇಳುವುದು.
3. ಪ್ರತೀ ಮಕ್ಕಳು ತಮ್ಮ ಬಣ್ಣದ ಅಂಗೈಯನ್ನು ಚಿತ್ರದಲ್ಲಿ ಕಾಣುವಂತೆ ಮರದ ಆಕೃತಿಯಲ್ಲಿ ಚಾರ್ಟ್‌ಪೇಪರ್ ಮೇಲೆ ಒತ್ತುವಂತೆ ಸೂಚಿಸುವುದು ಮತ್ತು 2 ನಿಮಿಷದ ನಂತರ ತಮ್ಮ ಕೈ ಮೇಲೆತ್ತುವಂತೆ ಹೇಳುವುದು.
4. ಎಲ್ಲಾ ಮಕ್ಕಳಿಗೂ ಈ ಅವಕಾಶ ದೊರೆತಿದೆಯೇ ಎಂದು ಶಿಕ್ಷಕಿ ಖಚಿತಪಡಿಸಿಕೊಳ್ಳುವುದು. ಮತ್ತು ದೊಡ್ಡ ಕೊಲಾಜ್‌ನ ಚಿತ್ರಣವನ್ನು ರಚಿಸುವುದು.
5. ನಂತರ ಮಕ್ಕಳಿಗೆ ಸೋಪಿನಿಂದ ತಮ್ಮ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಲು ಸಹಾಯ ಮಾಡುವುದು.

**ಚಟುವಟಿಕೆ 2**

## ‘ಮಾಲೆ ತಯಾರಿಸುವುದು’

### ಕಲಿಕಾ ಸಾಮಗ್ರಿಗಳು

ಬಣ್ಣ ಬಣ್ಣದ ಹೂಗಳು, ಹೂವಿನ ಗುಚ್ಛಗಳು, ದಾರ/ಹುರಿ

### ಸೂಚನೆಗಳು

4–5 ಮಕ್ಕಳಿರುವ ಸಣ್ಣ ಸಣ್ಣ ಗುಂಪುಗಳನ್ನು ಮಾಡುವುದು. ವಿವಿಧ ಹೂವುಗಳು ಮತ್ತು ಎಲೆಗಳನ್ನು ಮಕ್ಕಳಿಗೆ ಕೊಡುವುದು, ಹೂಗಳ ಗೊಂಚಲು, ಹೂ ಮತ್ತು ಎಲೆಗಳಿಂದ ಮಕ್ಕಳು ಮಾಲೆ ತಯಾರಿಸುವುದು. ಮಾಲೆಗಳಲ್ಲಿ ಮಾದರಿಗಳನ್ನು ಮಾಡಲು ಪ್ರೋತ್ಸಾಹಿಸಿ. ಉದಾ: ಪರ್ಯಾಯವಾಗಿ ವಿಭಿನ್ನ ಬಣ್ಣಗಳು: ಹೂ–ಹೂ–ಎಲೆ–ಹೂ–ಹೂವಿನ ಮಾದರಿ, ಹೂವಿನ ಗುಚ್ಛಗಳು ಇತ್ಯಾದಿ.

1. ಶಿಕ್ಷಕಿ ಸ್ಥಳೀಯವಾಗಿ ಸಿಗುವ ವಿವಿಧ ಹೂಗಳನ್ನು ತರಲು ಮಕ್ಕಳಿಗೆ ಹೇಳುವುದು.
2. ತೊಟ್ಟು ಇರುವ ಹೂಗಳು, ಗೊಂಚಲು ಇರುವ ಹೂಗಳು ಇರಬೇಕು ಎಂದು ತಿಳಿಸುವುದು.
3. ಗಟ್ಟಿ ದಾರ, ಹುರಿಯನ್ನು ಮೊದಲೇ ಸಂಗ್ರಹಿಸಿಟ್ಟುಕೊಂಡಿರಬೇಕು.
4. ಮಕ್ಕಳು ತೊಟ್ಟು ಇರುವ 5–6 ಹೂಗಳನ್ನು ಒಟ್ಟಿಗೆ ದಾರದಲ್ಲಿ ಸೇರಿಸಿ ಗಂಟು ಹಾಕಲು ಮಕ್ಕಳಿಗೆ ಸಹಕರಿಸುವುದು.
5. ಗೊಂಚಲು ಇರುವ ಹೂಗಳನ್ನು ದಾರದಲ್ಲಿ ಸೇರಿಸಿ ಗಂಟು ಹಾಕುತ್ತ ಮಾಲೆಯ ಹಾಗೆ ಮಾಡುವಂತೆ ಮಕ್ಕಳಿಗೆ ಸಹಕರಿಸುವುದು. ಮಧ್ಯ ಮಧ್ಯ ಗೊಂಚಲಿನ ಎಲೆಗಳನ್ನು ಹಾಕಬಹುದು.

## ಚಟುವಟಿಕೆ 3

## ಮುಕ್ತವಾಗಿ ಚಿತ್ರ ಬಿಡಿಸುವುದು

ಮುಕ್ತವಾಗಿ ಚಿತ್ರ ಬಿಡಿಸುವುದು – ಹಬ್ಬಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ಸನ್ನಿವೇಶದ ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚುವಂತೆ ಮಕ್ಕಳಿಗೆ ಹೇಳುವುದು.

## ಚಟುವಟಿಕೆ 4

## ತರಕಾರಿಗಳ ಮುದ್ರಣದಿಂದ ಶುಭಾಶಯ ಪತ್ರವನ್ನು ತಯಾರಿಸುವುದು







### ಕಲಿಕಾ ಸಾಮಗ್ರಿಗಳು

ಆಲೂಗಡ್ಡೆ, ಚಾರ್ಟ್‌ಪೇಪರ್, ಬಣ್ಣಗಳು

**ಸೂಚನೆಗಳು:** ಆಲೂಗಡ್ಡೆಯನ್ನು ಚಿತ್ರದಲ್ಲಿ ಕಾಣುವಂತೆ ಅರ್ಧಚಂದಾಕೃತಿಯ ಆಕಾರದಲ್ಲಿ ಮತ್ತು ಇನ್ನೊಂದು ಭಾಗದಲ್ಲಿ ನಕ್ಷತ್ರದ ಆಕಾರದಲ್ಲಿ ಕತ್ತರಿಸಿಟ್ಟುಕೊಳ್ಳಿ. ಕತ್ತರಿಸಿದ ಭಾಗವನ್ನು ಬಣ್ಣದಲ್ಲಿ ಅದ್ದಿ ಮತ್ತು ಚಾರ್ಟ್‌ಪೇಪರ್ ಮೇಲೆ ಒತ್ತಿರಿ. ಒಮ್ಮೆ ಆ ಆಕೃತಿ ಮೂಡಿದ ನಂತರ ಕಾರ್ಡ್‌ನ್ನು ಮತ್ತಷ್ಟು ಅಲಂಕರಿಸಲು ಮಕ್ಕಳಿಗೆ ಸಹಾಯ ಮಾಡಿ.

**ಚಿತ್ರ 2:** ಸ್ವಲ್ಪ ಕಠಿಣವಾಗಿರುವ 2–3 ಬೆಂಡೆಕಾಯಿಯನ್ನು ತೆಗೆದುಕೊಳ್ಳುವುದು. ಬೆಂಡೆಕಾಯಿಯ ಹಿಂಭಾಗದ ತುದಿಯನ್ನು ಕತ್ತರಿಸಿಕೊಳ್ಳುವುದು. ಮಿಶ್ರಗೊಳಿಸಿದ ಬಣ್ಣವನ್ನು ಕತ್ತರಿಸಿದ ಭಾಗದ ಬೆಂಡೆಕಾಯಿಯ ಮೇಲ್ಮೈಗೆ ಅನ್ವಯಿಸಿಸುವುದು. ಬಣ್ಣದ ಬೆಂಡೆಕಾಯಿಯ ಭಾಗವನ್ನು ಚಿತ್ರದಲ್ಲಿ ಕಾಣುವಂತೆ ಚಾರ್ಟ್‌ಪೇಪರ್ ಮೇಲೆ ಹೂವಿನ ಮಾದರಿಯಂತೆ ಮುದ್ರಿಸುವುದು.

## ಚಟುವಟಿಕೆ 5

## ದೀಪಾವಳಿಯ ದೀಪಗಳು



### ಕಲಿಕಾ ಸಾಮಗ್ರಿಗಳು

ಮಣ್ಣಿನ ದೀಪಗಳು, ಆಯಿಲ್ ಬಣ್ಣಗಳು/ತೈಲವರ್ಣ, ದೀಪವನ್ನು ಅಲಂಕರಿಸಲು ಬೇಕಾಗಿರುವ ಸಾಮಗ್ರಿಗಳು, ಉದಾ: ನಕ್ಕಿಗಳು, ವರ್ಣರಂಜಿತ ಗುಂಡಿಗಳು, ಸಣ್ಣ ಮಣಿಗಳು, ಸಣ್ಣ ಕನ್ನಡಿ ತುಣುಕುಗಳು, ಪೇಯಿಂಟ್ ಬ್ರಶ್‌ಗಳು. ಅಂಟು.

**ಸೂಚನೆಗಳು:** ಮಕ್ಕಳು ಜೇಡಿಮಣ್ಣಿನಿಂದ ದೀಪಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಬಿಸಿಲಿನಲ್ಲಿ ಸರಿಯಾಗಿ ಒಣಗಲು ಬಿಡುವುದು. ಒಮ್ಮೆ ಸರಿಯಾಗಿ ಒಣಗಿದ ನಂತರ, ದೀಪಗಳನ್ನು ಅಲಂಕರಿಸಲು ಮತ್ತು ಬಣ್ಣಗಳನ್ನು ಹಾಕಲು ಮಕ್ಕಳಿಗೆ ಸಹಾಯ ಮಾಡುವುದು. ಈ ಪರಿಕಲ್ಪನೆ ಅಥವಾ ದೀಪಾವಳಿ ಮುಗಿದ ನಂತರ ಎಲ್ಲಾ ಮಕ್ಕಳು ತಾವು ಮಾಡಿದ ದೀಪವನ್ನು ಮನೆಗೆ ತೆಗೆದುಕೊಂಡು ಹೋಗಲು ಅವಕಾಶ ನೀಡುವುದು.

ಚಟುವಟಿಕೆ 1

## ಕೋಲಾಟ

ಸರಳವಾದ ಕೋಲಾಟದ ಹೆಜ್ಜೆಗಳನ್ನು/ಸ್ಟೆಪ್ಸ್ ಹೇಳಿಕೊಡುವುದು.



### ಕಲಿಕಾ ಸಾಮಗ್ರಿಗಳು

ಜಾನಪದ ಹಾಡುಗಳು ಇರುವ ಧ್ವನಿ ಮುದ್ರಿಕೆ, ಕೋಲಾಟದ ಕೋಲುಗಳು

### ಸೂಚನೆಗಳು

1. ಇಡೀ ನೃತ್ಯವನ್ನು ಪ್ರದರ್ಶಿಸಿ. – ನೃತ್ಯಕ್ಕೆ ಸಂಬಂಧಿಸಿದ ಹಾಡನ್ನು ಶಿಶುಗೀತೆಯ ಪುಸ್ತಕದಿಂದ ಪಡೆಯುವುದು. / ಧ್ವನಿ ಮುದ್ರಣ ಮಾಡಿದ ಜಾನಪದ ಹಾಡಿಗೆ ಉದಾ: 'ಕೋಲು ಕೋಲಣ್ಣ ಕೋಲೆ, ಕೋಲು ಕೋಲೆ'. 'ಚಲ್ಲಿದರು ಮಲ್ಲಿಗೆಯಾ!!!!!! ಬಾನ ಸೂರಿಮ್ಯಾಲ'. ಇತ್ಯಾದಿ. ಹಾಡಿಗೆ ನೃತ್ಯ ಮಾಡಿಸುವುದು.
2. ಮಕ್ಕಳಿಗೆ ಸರಳ ಕೋಲಾಟದ ಹೆಜ್ಜೆಗಳನ್ನು ಕಲಿಸುವುದು. ಉದಾ: ಒಮ್ಮೆ ಬಲಬಾಗಕ್ಕೆ/ ಒಮ್ಮೆ ಎಡಬಾಗಕ್ಕೆ/ ಒಮ್ಮೆ ಮೇಲೆ/ ಒಮ್ಮೆ ಕೆಳಗೆ ಕೋಲುಗಳ ಮೂಲಕ ಹೆಜ್ಜೆ ಹಾಕಲು ಹೇಳಿಕೊಡುವುದು.

---

ಚಟುವಟಿಕೆ 2

## ವೃತ್ತದ ಒಳಗೆ ನೃತ್ಯ



### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣ, ನೃತ್ಯಕ್ಕೆ ಮಾಡಲು ಸಾಕಷ್ಟು ಸ್ಥಳಾವಕಾಶ

### ಸೂಚನೆಗಳು

1. ನೆಲದ ಮೇಲೆ ಒಂದು ದೊಡ್ಡ ವೃತ್ತವನ್ನು ಎಳೆಯುವುದು.
2. ಎಲ್ಲಾ ಮಕ್ಕಳು ವೃತ್ತದಲ್ಲಿ ನಿಲ್ಲುವಂತೆ ಹೇಳುವುದು
3. ಯಾವುದಾದರೂ ಸಂಗೀತದ ಧ್ವನಿ ಮುದ್ರಣವನ್ನು ಪ್ರಸಾರ ಮಾಡುವುದು.
4. ಈ ಸಂಗೀತಕ್ಕೆ ಮಕ್ಕಳು ವೃತ್ತದಲ್ಲಿ ನೃತ್ಯ ಮಾಡುವಂತೆ ಪ್ರೋತ್ಸಾಹಿಸುವುದು.

ಚಟುವಟಿಕೆ 1

## ಓಟ



### ಕಲಿಕಾ ಸಾಮಗ್ರಿಗಳು

3–4 ಯಾವುದಾದರು ಹೂಗಳು, ಲಭ್ಯವಿರುವ ಯಾವುದಾದರು ಒಂದು ಸಣ್ಣ ಬುಟ್ಟಿ.

### ಸೂಚನೆಗಳು

1. ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು.
2. ಓಡುವ ಸ್ಥಳದ ಮಧ್ಯ ಮಧ್ಯದಲ್ಲಿ 3–4 ಹೂಗಳನ್ನು ಅಲ್ಲಲ್ಲಿ ಮೊದಲೇ ಶಿಕ್ಷಕಿ ಇಟ್ಟಿರುವುದು.
3. ಮಗುವಿಗೆ ಬುಟ್ಟಿಯನ್ನು ಹಿಡಿದು ಸಾಲಿನಲ್ಲಿ ಓಡಲು ಹೇಳುವುದು.
4. ಮಗು ಅವನದೇ ಆದ ಚೌಕಟ್ಟಿನಲ್ಲಿ (ಗೆರೆಯ ಒಳಗೆ) ಓಡುವಾಗ, ಸಾಲಿನಲ್ಲಿ ಇರುವ ಎಲ್ಲಾ ಹೂವುಗಳನ್ನು ಎಚ್ಚರಿಕೆಯಿಂದ ಸಂಗ್ರಹಿಸಿ ಓಟವನ್ನು ಪೂರ್ಣಗೊಳಿಸುವಂತೆ ಹೇಳುವುದು.
5. ಓಟವನ್ನು ಯಾವ ಗುಂಪಿನ ಮಗು ಪೂರ್ಣಗೊಳಿಸಿರುತ್ತದೆಯೋ ಆ ಮಗುವಿಗೆ ಚಪ್ಪಾಳೆ ಮೂಲಕ ಪ್ರೋತ್ಸಾಹಿಸುವುದು. ನಂತರ ಇತರೆ ಮಕ್ಕಳಿಗೂ ಅವಕಾಶ ಕಲ್ಪಿಸುವುದು.

ಚಟುವಟಿಕೆ 2

## 'ಜಾನಪದ ನೃತ್ಯಗಳು'

**ಗಮನಿಸಿ:** ಜಾನಪದ ನೃತ್ಯದ ಕೆಲವು ಸರಳ ಹೆಜ್ಜೆಗಳನ್ನು ಮಕ್ಕಳಿಗೆ ಕಲಿಸಿ. ಅವರು ಧ್ವನಿಮುದ್ರಣ ಮಾಡಿದ ಸಂಗೀತಕ್ಕೆ ಅಥವಾ ತಾವು ಹಾಡುವ ಗೀತೆಗೆ ನೃತ್ಯ ಮಾಡಿಸುವುದು.

### ಕಲಿಕಾ ಸಾಮಗ್ರಿಗಳು

ಸಂಗೀತದ ಆಡಿಯೋಗಳು/ಜಾನಪದ ಹಾಡುಗಳು ಇರುವ ಧ್ವನಿಮುದ್ರಿಕೆಗಳು,

### ಸೂಚನೆಗಳು

1. ಶಿಕ್ಷಕಿ ಎಲ್ಲಾ ಮಕ್ಕಳನ್ನು ವೃತ್ತದಲ್ಲಿ ನಿಲ್ಲುವಂತೆ ಸೂಚಿಸುವುದು.
2. ಮಕ್ಕಳ ನಡುವೆ ಸಾಕಷ್ಟು ಜಾಗ/ಸ್ಥಳಾವಕಾಶವನ್ನು ಹೊಂದಲು ಹೇಳುವುದು.
3. ಯಾವುದೇ ನೃತ್ಯವನ್ನು ಹೇಳಿಕೊಡುವ ಮುನ್ನ ಅದರ ಬಗ್ಗೆ ವೀಡಿಯೋ ಲಭ್ಯವಿದ್ದರೆ/ನಿಮಗೆ(ಶಿಕ್ಷಕಿ) ತಿಳಿದಿದ್ದರೆ ಮಕ್ಕಳಿಗೆ ಮೊದಲು ಅದನ್ನು ತೋರಿಸುವುದು.
4. ನೃತ್ಯದ ಹಂತಗಳನ್ನು ಗುರುತಿಸಿ, ಪ್ರತಿಯೊಂದು ಹಂತವನ್ನೂ ಪ್ರತ್ಯೇಕವಾಗಿ ಹೇಳಿಕೊಡುವುದು.
5. ಒಮ್ಮೆ ಸಂಗೀತವಿಲ್ಲದೆ ನೃತ್ಯ ಮಾಡಲು ಹೇಳಿಕೊಡುವುದು.
6. ಒಮ್ಮೆ ಸಂಗೀತದೊಂದಿಗೆ ನೃತ್ಯ ಮಾಡಲು ಹೇಳಿಕೊಡುವುದು.
7. ಎಲ್ಲಾ ಮಕ್ಕಳು ನೃತ್ಯ ಮಾಡುವಂತೆ ಪ್ರೋತ್ಸಾಹಿಸುವುದು.

# ಆಚರಣೆಗಳು ಮತ್ತು ಹಬ್ಬಗಳು

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು

1. Wish a person on their birthday
2. Wish a person on new year
3. Wish a person on Ugadi

1. Wish a person on their birthday
2. Wish a person on new year
3. Wish a person on Ugadi

1. Wish a person on their birthday
2. Wish a person on new year
3. Wish a person on Ugadi

1. Wish a person on Eid
2. Wish a person on Christmas
3. Wish a sick person

1. Wish a person on Eid
2. Wish a person on Christmas
3. Wish a sick person

1. Wish a person on Eid
2. Wish a person on Christmas
3. Wish a sick person


Say

gesture

model

1. Wish a person on their birthday
2. Wish a person on new year
3. Wish a person on Ugadi
4. Wish a person on Eid
5. Wish a person on Christmas
6. Wish a sick person

1. Wish a person on Ugadi
2. Wish a person on Christmas
3. Wish a person on their birthday
4. Wish a sick person
5. Wish a person on Eid
6. Wish a person on new year



## ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ

# ಸ್ಥಳೀಯ ಜಾತ್ರೆಗಳು



# ಕಲಿಕಾ ಫಲಿತಗಳು

## ಉಪವಿಷಯ 3.2: ಸ್ಥಳೀಯ ಜಾತ್ರೆಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಜಾತ್ರೆಗಳು ಮತ್ತು ಇತರ ಸಭೆಗಳ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವುದು | 1 ಸಮುದಾಯದಲ್ಲಿ ನಡೆಯುವ ಜಾತ್ರೆಗಳು ಮತ್ತು ಸನ್ನಿವೇಶಗಳನ್ನು ಗುರುತಿಸುವುದು. | 1 ಜಾತ್ರೆಗಳಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಅರ್ಥಮಾಡಿಕೊಳ್ಳುವುದು |
| 2 ಸಮುದಾಯದಲ್ಲಿ ನಡೆಯುವ ಜಾತ್ರೆಗಳನ್ನು ಗುರುತಿಸುವುದು | 2 ಜಾತ್ರೆಗಳಲ್ಲಿ ಲಭ್ಯವಿರುವ ಮುಖ್ಯ ಚಟುವಟಿಕೆಗಳು ಮತ್ತು ಮನರಂಜನೆಗಳನ್ನು ಅರ್ಥಮಾಡಿಕೊಳ್ಳುವುದು | 2 ಕಳೆದು ಹೋದರೆ ಏನು ಮಾಡಬೇಕು ಎಂಬ ನಿಯಮಗಳ ಪುನರಾವರ್ತನೆ |
| 3 ಜಾತ್ರೆಗಳಲ್ಲಿ ಅನುಸರಿಸಬೇಕಾದ ಸುರಕ್ಷತಾ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು. | 3 ಜಾತ್ರೆಗಳ ಹಿಂದಿನ ಉದ್ದೇಶ, ಜಾತ್ರೆಯಲ್ಲಿನ ಸನ್ನಿವೇಶಗಳು ಮತ್ತು ಅಲ್ಲಿ ಏನು ನಡೆಯುತ್ತಿದೆ? ಎಂಬುದನ್ನು ಅರ್ಥಮಾಡಿಕೊಳ್ಳುವುದು. | 3 ಸುರಕ್ಷಿತ ಮತ್ತು ಆರೋಗ್ಯಕರ ಆಹಾರಗಳಿಗೆ ಸಂಬಂಧಿಸಿದ ನಿಯಮಗಳ ಪುನರಾವರ್ತನೆ |
| 4 ಜಾತ್ರೆಗಳ ಹೆಸರುಗಳು ಮತ್ತು ಸನ್ನಿವೇಶಗಳನ್ನು ಒಳಗೊಂಡಂತೆ ಜಾತ್ರೆಯೊಂದಿಗೆ ಸಂಯೋಜಿತವಾದ ಪ್ರಮುಖ ಪದಗಳನ್ನು ವಿವರಿಸುವುದು. | 4 ಜಾತ್ರೆಗಳಲ್ಲಿ ಸ್ಥಳೀಯ ಜಾತ್ರೆಗಳು, ಅವುಗಳ ಉದ್ದೇಶ ಮತ್ತು ಸನ್ನಿವೇಶಗಳನ್ನು ಹೆಸರಿಸುವುದು. | 4 ಜಾತ್ರೆಗಳಲ್ಲಿ ತಮ್ಮ ವಸ್ತುಗಳನ್ನು ಜೋಪಾನ ಮಾಡಿಕೊಳ್ಳುವುದು. |
| | 5 ಜಾತ್ರೆಗೆ ಹೋಗುವ ಮೊದಲು ಪೂರ್ವಸಿದ್ಧತಾ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು – ಹೆಸರು ಕಾರ್ಡುಗಳು (ಗುರುತಿನ ಪತ್ರ) ಮತ್ತು ದೂರವಾಣಿ ಸಂಖ್ಯೆಗಳು, ಅಗತ್ಯವಿಲ್ಲದ ಆಭರಣಗಳನ್ನು ತೆಗೆದಿಟ್ಟು ಹೋಗುವುದು. | |

ಉಪವಿಷಯ 3.2

# ಸ್ಥಳೀಯ ಜಾತ್ರೆಗಳು



## ಕಲಿಕಾ ಉದ್ದೇಶಗಳು

- ಸಮುದಾಯದಲ್ಲಿ ನಡೆಯುವ ಜಾತ್ರೆಗಳು ಮತ್ತು ಸನ್ನಿವೇಶಗಳನ್ನು ಗುರುತಿಸುವುದು.
- ಜಾತ್ರೆಗಳಲ್ಲಿ ಲಭ್ಯವಿರುವ ಮುಖ್ಯ ಚಟುವಟಿಕೆಗಳು ಮತ್ತು ಮನರಂಜನೆಗಳನ್ನು ಅರ್ಥಮಾಡಿಕೊಳ್ಳುವುದು
- ಜಾತ್ರೆಗಳ ಹಿಂದಿನ ಉದ್ದೇಶ, ಜಾತ್ರೆಯಲ್ಲಿನ ಸನ್ನಿವೇಶಗಳು ಮತ್ತು ಅಲ್ಲಿ ಏನು ನಡೆಯುತ್ತಿದೆ? ಎಂಬುದನ್ನು ಅರ್ಥಮಾಡಿಕೊಳ್ಳುವುದು.
- ಜಾತ್ರೆಗಳಲ್ಲಿ ಸ್ಥಳೀಯ ಜಾತ್ರೆಗಳು, ಅವುಗಳ ಉದ್ದೇಶ ಮತ್ತು ಸನ್ನಿವೇಶಗಳನ್ನು ಹೆಸರಿಸುವುದು.
- ಜಾತ್ರೆಗೆ ಹೋಗುವ ಮೊದಲು ಪೂರ್ವಸಿದ್ಧತಾ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು – ಹೆಸರು ಕಾರ್ಡುಗಳು (ಗುರುತಿನ ಪತ್ರ) ಮತ್ತು ದೂರವಾಣಿ ಸಂಖ್ಯೆಗಳು, ಅಗತ್ಯವಿಲ್ಲದ ಆಭರಣಗಳನ್ನು ತೆಗೆದಿಟ್ಟು ಹೋಗುವುದು.

ಸಂಭಾಷಣೆ 1

## ಜಾತ್ರೆಗಳನ್ನು ನಾನು ನೋಡಿದ್ದೇನೆ!

### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

1. ಸಮುದಾಯದಲ್ಲಿ ನಡೆಯುವ ಜಾತ್ರೆಗಳನ್ನು ಗುರುತಿಸುವುದು.
2. ಜಾತ್ರೆಗಳ ಹಿಂದಿನ ಉದ್ದೇಶ, ಜಾತ್ರೆಯಲ್ಲಿನ ಸನ್ನಿವೇಶಗಳು ಯಾವುವು? ಎಂಬುದನ್ನು ಅರ್ಥಮಾಡಿಕೊಳ್ಳುವುದು.
3. ಜಾತ್ರೆಗಳಲ್ಲಿ ಸ್ಥಳೀಯ ಜಾತ್ರೆಗಳು, ಅವುಗಳ ಉದ್ದೇಶ ಮತ್ತು ಸನ್ನಿವೇಶಗಳನ್ನು ಹೆಸರಿಸುವುದು.
4. ಜಾತ್ರೆಗಳ ವೀಕ್ಷಣೆ ಮತ್ತು ಅನುಭವವನ್ನು ಬಳಸಿಕೊಂಡು ಜಾತ್ರೆಗಳ ಬಗ್ಗೆ ತಮ್ಮದೇ ಮಾತುಗಳಲ್ಲಿ ವಿವರಿಸುವುದು.

### ಕಲಿಕಾ ಸಾಮಗ್ರಿಗಳು

ಸಂಭಾಷಣಾ ಚಾರ್ಟ್ (ಟಿ.ಎಲ್.ಎಮ್–1) ಸಂತೆ/ಜಾತ್ರೆ **P3.2.1-1**




### ಶಿಕ್ಷಕರ ಪೂರ್ವಸಿದ್ಧತೆ

ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು

### ಸೂಚನೆಗಳು

1. ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಮಕ್ಕಳು ಪರಸ್ಪರ ನೋಡಬಹುದು ಮತ್ತು ಸಂಭಾಷಣೆಯಲ್ಲಿ ತೊಡಗಬಹುದು ಎಂಬುದನ್ನು ಖಚಿತಪಡಿಸಿಕೊಳ್ಳುವುದು.
2. ಗ್ರಾಮ/ಸಮುದಾಯದ ಜಾತ್ರೆಗಳಿಗೆ ಸಂಬಂದಿಸಿದಂತೆ ಮಕ್ಕಳೊಂದಿಗೆ ಸಂಭಾಷಣೆಯನ್ನು ಪ್ರಾರಂಭಿಸುವುದು.

**ಹಂತ 1:** ಸಂಭಾಷಣಾ ಚಾರ್ಟ್‌ನ್ನು ಮಕ್ಕಳಿಗೆ ತೋರಿಸಿ. ಅದರಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ವಿವರಿಸಲು ಹೇಳಿ. ಪ್ರತಿ ಮಗುವಿಗೆ ಮಾತನಾಡಲು ಅವಕಾಶ ನೀಡಿ. ಅಂದರೆ ಮಕ್ಕಳು ವಸ್ತುಗಳಿಗಿಂತ ಚಟುವಟಿಕೆಗಳು ಮತ್ತು ಕಾರ್ಯಗಳನ್ನು ವಿವರಿಸುವಲ್ಲಿ ಹೆಚ್ಚು ಗಮನವಿರಬೇಕು.

**ಹಂತ 2:** ಸಂಭಾಷಣಾ ಚಾರ್ಟ್‌ನ್ನು ತೋರಿಸಿ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಮೊದಲು ವಾಸ್ತವಿಕ/ನೈಜ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪ್ರಾರಂಭಿಸಿ, ನಿಧಾನವಾಗಿ ತಾರ್ಕಿಕ ಪ್ರಶ್ನೆಗಳನ್ನು ಸೇರಿಸುತ್ತಾ ಹೋಗಿ. (ಮಕ್ಕಳು ಉತ್ತರಕ್ಕಾಗಿ ಆಲೋಚಿಲು ಪ್ರಾರಂಭಿಸುತ್ತಾರೆ)

- ಅಲ್ಲಿ ಏನಾದರೂ ಸ್ಪರ್ಧೆಗಳು ನಡೆಯುತ್ತಿದೆಯೇ? ನೀವು ಅದನ್ನು ಗಮನಿಸಿದ್ದೀರಾ? ಅಲ್ಲಿ ಏನು ನಡೆಯುತಿತ್ತು?
- ಯಾವ ಯಾವ ವಸ್ತುಗಳನ್ನು ಮಾರಾಟ ಮಾಡಲಾಗುತಿತ್ತು? ನೀವು ಅದನ್ನು ಗಮನಿಸಿದ್ದೀರಾ? ಮತ್ತು ಏನು ಮಾರಾಟ ಮಾಡುತಿದ್ದರು ಎಂಬುದನ್ನು ನೀವು ವಿವರಿಸುವಿರಾ?
- ಮಕ್ಕಳು ಎಲ್ಲಿ ಆಡುತ್ತಿದ್ದಾರೆ? ಈ ಆಟದಲ್ಲಿ ಏನಾಗುತ್ತದೆ?

**ಹಂತ 3:** ಸಂಭಾಷಣಾ ಚಾರ್ಟ್‌ಗೆ ಸಂಬಂಧಿಸಿದಂತೆ ತಮ್ಮ ಸ್ವಂತ ಅನುಭವವನ್ನು ತಿಳಿಸಲು ಮಕ್ಕಳನ್ನು ಕೇಳಿ. ಉದಾ; ಚಿತ್ರದಲ್ಲಿ ಯಾವ ಮಕ್ಕಳು ಸಂತೋಷವಾಗಿ ಕಾಣುತ್ತಾರೆ? ಯಾರು ಸಂತೋಷವಾಗಿಲ್ಲ? ಏಕೆ ಎಂದು ನೀವು ಯೋಚಿಸಬಹುದೇ? ಅವರು ಸಂತೋಷವಾಗಿಲ್ಲದಿರಲು ಕಾರಣವೇನು? ಸಂಭಾಷಣಾ ಚಾರ್ಟ್/ಪೋಸ್ಟರ್‌ನ ಒಂದು ನಿರ್ದಿಷ್ಟ ಭಾಗವನ್ನು ತೋರಿಸಿ ಅಲ್ಲಿ ಏನಾಗುತ್ತಿದೆ ಎಂದು ವಿವರಿಸಲು ಮಕ್ಕಳಿಗೆ ಕೇಳಿ. ಜಾತ್ರೆಯಲ್ಲಿ ಅವರು ಇದೇ ರೀತಿ ಏನಾದರೂ ಮಾಡಿದ್ದಾರೆಯೇ? ಅದನ್ನು ಮಾಡುವಾಗ ಅವರಿಗೆ ಹೇಗೆ ಅನಿಸಿತು? (ಉದಾ: ಅವರು ಜಾತ್ರೆಯಲ್ಲಿ ಜ್ಯಾಯಿಂಟ್‌ವೀಲ್ (ತಿರುಗುವ ತೊಟ್ಟಿಲು)ಲ್ಲಿ ಆಡಿದ್ದಾರೆಯೇ? ಅದನ್ನು ಆಡುವಾಗ ಆ ಸಮಯದಲ್ಲಿ ಅವರಿಗೆ ಯಾವ ರೀತಿ ಅನುಭವವಾಯಿತು? ಚಿತ್ರದಲ್ಲಿರುವ ಮಕ್ಕಳಿಗೂ ಅದೇ ರೀತಿಯಾದ ಅನುಭವ ಆಗುತ್ತಿದೆಯೇ ಎಂದು ಅವರು ಭಾವಿಸುತ್ತಾರೆಯೇ?

ಸಂಭಾಷಣೆ 2

# ನಾನು ಜಾತ್ರೆಗೆ ಹೋಗುವ ಮೊದಲು



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಜಾತ್ರೆಗೆ ಹೋಗುವ ಮೊದಲು ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಹಂತಗಳನ್ನು ಗುರುತಿಸುವುದು.

**ಕಲಿಕಾ ಸಾಮಗ್ರಿಗಳು:** ಏನು ಇಲ್ಲ

## ಶಿಕ್ಷಕರ ಪೂರ್ವಸಿದ್ಧತೆ


ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

## ಸೂಚನೆಗಳು

1. ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಎಲ್ಲಾ ಮಕ್ಕಳು ಪರಸ್ಪರ ನೋಡಬಹುದು ಎಂದು ಖಚಿತಪಡಿಸಿಕೊಳ್ಳುವುದು.
2. ಜಾತ್ರೆಗೆ ಹೋಗುವ ಮೊದಲು ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳನ್ನು ಮತ್ತು ಅವು ಏಕೆ ನಮಗೆ ಮುಖ್ಯವೆಂದು ಮಕ್ಕಳನ್ನು ಕೇಳುವ ಮೂಲಕ ಸಂಭಾಷಣೆಯನ್ನು ಪ್ರಾರಂಭಿಸಿ. ಸುರಕ್ಷಿತವಾಗಿರಲು ಅವರು ಏನು ಮಾಡಬೇಕು?
   - ಅವರು ಸಾಮಾನ್ಯವಾಗಿ ಜಾತ್ರೆಗೆ ಯಾರೊಂದಿಗೆ ಹೋಗುತ್ತಾರೆ? ನೀವು ಯಾವಾಗಲೂ ಪೋಷಕರು ಅಥವಾ ವಯಸ್ಕರ ಕೈಯನ್ನು ಏಕೆ ಹಿಡಿದಿರಬೇಕು. ಮತ್ತು ಜಾತ್ರೆಯಲ್ಲಿ ಪೋಷಕರ ಹತ್ತಿರ ಇರಬೇಕು.
   - ನೀವು ಏನನ್ನಾದರೂ ನೋಡಿದರೆ ಮತ್ತು ಅದನ್ನು ನೋಡಲು ಬಯಸಿದರೆ ನೀವು ಏನು ಮಾಡುತ್ತೀರಿ? ಅದನ್ನು ನೋಡಲು ನೀವು ಓಡಿಹೋಗುವಿರಾ? ಯಾಕೆ ಹೋಗಬಾರದು?
   - ನಿಮಗೆ ಗೊತ್ತಿಲ್ಲದ ಯಾರಾದರೂ ನಿಮಗೆ ತಿನ್ನಲು ಏನಾದರೂ ನೀಡುತ್ತಾರೆಂದು ಭಾವಿಸೋಣ? ನೀವು ಅದನ್ನು ತೆಗೆದುಕೊಳ್ಳಬೇಕೆ? ಯಾಕೆ ತೆಗೆದುಕೊಳ್ಳಬಾರದು? ಅಪರಿಚಿತರಿಂದ ತಿನ್ನಬಹುದಾದ ವಸ್ತುಗಳನ್ನು ತೆಗೆದುಕೊಳ್ಳಬೇಡಿ.
   - ಯಾರಾದರೂ ನಿಮಗೆ ಏನನ್ನಾದರೂ ತೋರಿಸಲು ಅಥವಾ ಯಾವುದನ್ನಾದರೂ ಆಡಲು ನಿಮ್ಮನ್ನು ಕರೆದೊಯ್ಯುತ್ತಾರೆ ಎಂದು ಭಾವಿಸೋಣ. ನೀವು ಹೋಗುವಿರಾ? ಯಾಕೆ ಹೋಗಬಾರದು?
3. ಅವರು ಕಳೆದುಹೋದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಯಾವುವು ಮತ್ತು ಹೇಗೆ ಸಹಾಯ ಪಡೆಯಬಹುದು ಎಂದು ಚರ್ಚಿಸುವುದು.
4. ತಮ್ಮ ಪೂರ್ತಿ ಹೆಸರು, ತಮ್ಮ ಹಳ್ಳಿಯ ಹೆಸರು ಮತ್ತು ಪೋಷಕರಲ್ಲಿ ಯಾರಾದರೊಬ್ಬರ ದೂರವಾಣಿ/ಮೊಬೈಲ್ ಸಂಖ್ಯೆ ನೆನಪಿಟ್ಟುಕೊಳ್ಳಲು ಸಹಾಯ ಮಾಡುವುದು.

ಸಂಭಾಷಣೆ 1

## ಜಾತ್ರೆಯಲ್ಲಿ ನಾವು ಏನು ಮಾಡಿದ್ದೇವೆ?



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಜಾತ್ರೆಗಳ ವೀಕ್ಷಣೆ ಮತ್ತು ಅನುಭವವನ್ನು ಬಳಸಿಕೊಂಡು ಜಾತ್ರೆಗಳ ಬಗ್ಗೆ ತಮ್ಮದೇ ಮಾತುಗಳಲ್ಲಿ ವಿವರಿಸುವುದು.
- ಜಾತ್ರೆಗಳಲ್ಲಿ ತಮ್ಮದೇ ಆದ ವೀಕ್ಷಣೆ ಮತ್ತು ಅನುಭವಗಳನ್ನು ಬಳಸಿಕೊಂಡು ಮಕ್ಕಳು ಮಾಡಬಹುದಾದ ಕೆಲವು ಚಟುವಟಿಕೆಗಳನ್ನು ಅಥವಾ ಜಾತ್ರೆಗಳಲ್ಲಿ ಅವರು ಖರೀದಿಸಬಹುದಾದ ವಸ್ತುಗಳ ಬಗ್ಗೆ ವಿವರಿಸುವುದು.

**ಕಲಿಕಾ ಸಾಮಗ್ರಿಗಳು:** ಏನೂ ಇಲ್ಲ

### ಶಿಕ್ಷಕರ ಪೂರ್ವಸಿದ್ಧತೆ

ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

### ಸೂಚನೆಗಳು

1. ಹಿಂದಿನ ಚರ್ಚೆಯನ್ನು ಪುನರಾವರ್ತಿಸುವುದು.
2. ಕಳೆದ ವರ್ಷದ ಜಾತ್ರೆಯಲ್ಲಿ ಅವರು ಏನು ಮಾಡಿದರು ಎಂಬುದನ್ನು ವಿವರಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು.
3. ಸರಳ ವಾಕ್ಯಗಳಾಗಿದ್ದರೂ ಸಹ ಅವರಿಗೆ ಸಂಪೂರ್ಣ ವಾಕ್ಯಗಳಲ್ಲಿ ಮಾತನಾಡಬೇಕೆಂದು ಒತ್ತಾಯಿಸುವುದು.
4. ವ್ಯಾಪಾರ ವಹಿವಾಟಿಗೆ ಮತ್ತು ಸಮುದಾಯಕ್ಕೆ ಸಾಂಸ್ಕೃತಿಕ ವೇದಿಕೆಯನ್ನು ಒದಗಿಸುವಲ್ಲಿ ಸ್ಥಳೀಯ ಜಾತ್ರೆಗಳು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಒತ್ತಿ ಹೇಳುವ ಮೂಲಕ ಪುನರಾವರ್ತಿಸುವುದು.
5. ನೀವು ನೋಡಿದ ಯಾವುದಾದರು ಜಾನಪದ ನೃತ್ಯ ಪ್ರದರ್ಶನಗಳನ್ನು ನೆನಪಿಸಿಕೊಳ್ಳುತ್ತೀರಾ ಎಂದು ಮಕ್ಕಳನ್ನು ಕೇಳಿ. ಗುಂಪಿನಲ್ಲಿ ಜಾನಪದ ನೃತ್ಯವನ್ನು ಅಭ್ಯಾಸ ಮಾಡಲು ಅವರಿಗೆ ಸಹಾಯ ಮಾಡುವುದು.

ಯೋಜನಾ ಕಾರ್ಯ 1

## ತರಗತಿಯಲ್ಲಿ ಜಾತ್ರೆ ನಡೆಸಿ

### ಕಲಿಕಾ ಸಾಮಗ್ರಿಗಳು

ತರಗತಿಯಲ್ಲಿರುವ ಆಟಿಕೆ ವಸ್ತುಗಳು, ರಿಂಗ್‌ಗಳು, ಬೌಲ್‌ಪಿನ್ಸ್‌ಗಳು, ಬಾಲ್, ನಾಣ್ಯ. ಬಕೆಟ್, ಸ್ಟೀಲ್ ತಟ್ಟೆ.

### ಸೂಚನೆಗಳು

ಮಕ್ಕಳು ವಿವಿಧ ಸ್ಟಾಲ್/ಅಂಗಡಿಗಳನ್ನು ಇಟ್ಟುಕೊಂಡು ಆಟಗಳನ್ನು ಆಡುವ ಮೂಲಕ ತರಗತಿಯಲ್ಲಿ ಜಾತ್ರೆ ನಡೆಸುವಂತೆ ಹೇಳುವುದು.

## ನಾಣ್ಯಗಳ ಟಾಸ್

### ಕಲಿಕಾ ಸಾಮಗ್ರಿಗಳು

ನೀರಿರುವ ಬಕೆಟ್, ಸ್ಟೀಲ್ ತಟ್ಟೆ, ನಾಣ್ಯಗಳು,

### ಸೂಚನೆಗಳು

ಒಂದು ಬಕೆಟ್‌ಲ್ಲಿ ಅರ್ಧ ತುಂಬಿದ ನೀರಿನ ಬಕೆಟ್ ತೆಗೆದುಕೊಳ್ಳಿ, ಅದರ ಒಳಗೆ ಸಣ್ಣ ಸ್ಟೀಲ್ ತಟ್ಟೆಯನ್ನು ಇಡಿ. ಮಗುವಿಗೆ ನಾಣ್ಯವನ್ನು ಕೊಟ್ಟು ಸ್ವಲ್ಪ ಅಂತರದಿಂದ ನಾಣ್ಯವನ್ನು ಸರಿಯಾಗಿ ನೀರಿರುವ ಬಕೆಟ್ ಒಳಗಿನ ತಟ್ಟೆಯಲ್ಲಿ ಬೀಳುವಂತೆ ಎಸೆಯಲು ಹೇಳಿ. ಮಗು ಸರಿಯಾಗಿ ನಾಣ್ಯವನ್ನು ಎಸೆಯುವಂತೆ ಪ್ರೋತ್ಸಾಹಿಸುವುದು.

## ಬೌಲ್‌ಪಿನ್ಸ್ ಟಾಸ್

### ಕಲಿಕಾ ಸಾಮಗ್ರಿಗಳು

ಬೌಲ್‌ಪಿನ್ಸ್‌ಗಳು, ಬಾಲ್

### ಸೂಚನೆಗಳು

ಬೌಲ್‌ಪಿನ್ಸ್‌ಗಳನ್ನು ನೆಲದ ಮೇಲೆ ಒಂದರ ನಂತರ ಒಂದರಂತೆ ಸಾಲಾಗಿ ಜೋಡಿಸಿ ಬಾಲ್‌ನಿಂದ ಬೌಲ್‌ಪಿನ್ಸ್‌ಗಳಿಗೆ ಗುರಿ ಇಟ್ಟು ಹೊಡೆಯಲು ಹೇಳುವುದು. ಹೊಡೆದಾಗ ಎಲ್ಲಾ ಬೌಲ್‌ಪಿನ್ಸ್‌ಗಳು ನೆಲಕ್ಕೆ ಉರುಳಬೇಕು ಎಂದು ತಿಳಿಸುವುದು. ಎಲ್ಲಾ ಮಕ್ಕಳಿಗೆ ಈ ಅವಕಾಶ ಕಲ್ಪಿಸಿಕೊಡುವುದು.

## ಸುರಂಗ ಆಟ

### ಸೂಚನೆಗಳು

ಮಕ್ಕಳು ತಮ್ಮ ಕಾಲುಗಳನ್ನು ಅಗಲಿಸಿ ಸಾಲಿನಲ್ಲಿ ನಿಲ್ಲುತ್ತಾರೆ. ಹಿಂಭಾಗದಿಂದ ಮಗು ಎಲ್ಲಾ ಮಕ್ಕಳ ಕಾಲುಗಳ ಕೆಳಗೆ ನುಸುಳಿಕೊಂಡು ಸಾಲಿನ ಮುಂಭಾಗಕ್ಕೆ ತೆವಳುತ್ತಾ ಬರುವುದು. ಹೀಗೆ ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳುವುದು.

ಮಕ್ಕಳು ತಮಗೆ ಬೇಕಾದ ಆಟವನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿಸಿ ಮತ್ತು ಆಟವನ್ನು ಆಡಲು ಸರದಿಯಲ್ಲಿ ನಿಲ್ಲುವಂತೆ ಸಹಾಯ ಮಾಡಿ. ಮಾರಾಟಗಾರರನ್ನು ಕೂಗಿ ಕೇಳಿ ಮತ್ತು ಆಟಕ್ಕೆ ಬರುವಂತೆ ಜನರನ್ನು ಆಹ್ವಾನಿಸಿ.

ಯೋಜನಾ ಕಾರ್ಯ 2

# ಜಾತ್ರೆಯ ಚಿತ್ರಗಳನ್ನು ಕೊಲಾಜ್ ಮಾಡುವುದು

## ಕಲಿಕಾ ಫಲಿತಗಳು

- ಸಣ್ಣಸ್ನಾಯು ಬೆಳವಣಿಗೆಯ ಅಭಿವೃದ್ಧಿ
- ಜಾತ್ರೆಗಳಿಗೆ ಸಂಬಂಧಿಸಿದ ಚಟುವಟಿಕೆಗಳ ಸೃಜನಾತ್ಮಕ ಚಿತ್ರಣ
- ಸಹಭಾಗಿತ್ವದ ಕೆಲಸ

## ಕಲಿಕಾ ಸಾಮಗ್ರಿಗಳು

ಚಾರ್ಟ್ ಪೇಪರ್, ಕ್ರಯಾನ್ಸ್, ಹಳೆಯ ನಿಯತಕಾಲಿಕೆಗಳಿಂದ ಸಂಗ್ರಹಿಸಿದ ಚಿತ್ರಗಳು, ಬಣ್ಣದ ಪೆನ್ನುಗಳು. (ಸ್ಕೆಚ್‌ಪೆನ್) ಅಂಟು

## ಸೂಚನೆಗಳು

1. ಮಕ್ಕಳಿಗೆ ಜಾತ್ರೆ ಮತ್ತು ಸಂತೆಗೆ ಸಂಬಂಧಿಸಿದ ಚಿತ್ರಗಳನ್ನು ಹಳೆಯ ನಿಯತಕಾಲಿಕೆಗಳಿಂದ/ದಿನಪತ್ರಿಕೆಗಳಿಂದ ಸಂಗ್ರಹಿಸಿ ತರುವಂತೆ ಹೇಳುವುದು. ಮಕ್ಕಳನ್ನು 4 ಸಣ್ಣ ಗುಂಪುಗಳನ್ನಾಗಿ ವಿಂಗಡಿಸಿ.
2. ಚಾರ್ಟ್ ತಯಾರಿಕೆಗಾಗಿ ಎಲ್ಲಾ ಗುಂಪಿನ ಮಕ್ಕಳು ತಾವು ಸಂಗ್ರಹಿಸಿದ ಚಿತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.
3. ಎಲ್ಲಾ ಚಿತ್ರಗಳನ್ನು ಸೂಕ್ತವಾಗಿ ಚಾರ್ಟ್ ಪೇಪರ್‌ಲ್ಲಿ ಅಂಟಿಸಲು ಮಕ್ಕಳಿಗೆ ಹೇಳುವುದು. ಅಗತ್ಯವಿದ್ದಲ್ಲಿ ಶಿಕ್ಷಕಿ ಸಹಾಯಮಾಡುವುದು.

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

ಈ ಕೆಳಗಿನ ಶಿಶುಗೀತೆಗಳನ್ನು ಸರಿಯಾದ ಪದಗಳು, ಸರಿಯಾದ ಉಚ್ಚಾರಣೆ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವುದು.

**ಗಮನಿಸಿ:** ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ಹಬ್ಬ, ಜಾತ್ರೆ, ಆಚರಣೆಗಳು' ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವ ಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಸಚಿತ್ರವಾಗಿ ಶಿಶುಗೀತೆಯನ್ನು ಒಂದು ಮೂಲೆಯಲ್ಲಿ ಬರೆಯುವುದು ಮತ್ತು ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ, ಕಣ್ಣಿನ ಎತ್ತರಕ್ಕೆ ಸರಿ ಹೊಂದುವಂತೆ ಪ್ರದರ್ಶಿಸಿ.

### ಸೂಚನೆಗಳು


1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದನ್ನು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

ಶಿಶುಗೀತೆ 1

## ತೇರು

# ತೇರು

ನಮ್ಮೂರ ತೇರು ಬಲು ಜೋರು
ನೋಡಲು ಬರುವರು ನೂರಾರು
ಬಣ್ಣ ಬಣ್ಣದ ಪತಾಕೆ ಕಟ್ಟಿ
ಬಾಲೆ ದಿಂಡು ತೋರಣ ಕಟ್ಟಿ
ನೋಡು ನೋಡು ತೇರಿನ ತುದಿಯು
ಥಳ ಥಳಿಸುವ ಹೊನ್ನಿನ ಕಳಸ
ನೋಡುವ ಬನ್ನಿ ಜೊತೆ ಜೊತೆಯಾಗಿ
ಸವಿಯುವ ಸಂತಸ ಜೊತೆಯಾಗಿ.



ಶಿಶುಗೀತೆ ೨

# Many Kinds of Shapes

## Many Kinds of Shapes

There are many kinds of shapes
I see them everywhere
I love circles and rectangles,
Triangles and squares.

I am just one line, that goes round and
round, and I can roll on the ground
What am I?

If you look really close
You will see,
I have 3 sides
I 2 3
What am I?

I have four sides
They are all the same
If you know my name
You are good at this game
What am I?

I have four sides
Like a square
But 2 sides are shorter
And I don't care
What am I


Source: the Singing Walrus

ಶಿಶುಗೀತೆ ೨

## ಜಾತ್ರೆ

# ಜಾತ್ರೆ

ಜಾತ್ರೆ ಜಾತ್ರೆ ಜನಗಳ ಜಾತ್ರೆ
ಖರ್ಜೂರ ಕಿತ್ತಳೆ ಕೊಳ್ಳುವ ಜಾತ್ರೆ
ಬೆಂಡು ಬತ್ತಾಸರು ಮಾರುವ ಜಾತ್ರೆ
ತಮಟೆ ಬಾರಿಸಿ ಕುಣಿಯುವ ಜಾತ್ರೆ
ಹರುಷದಿ ರಥವನು ಎಳೆಯುವ ಜಾತ್ರೆ
ಸುಗ್ಗಿಯ ಕಾಲದ ಅಂದದ ಜಾತ್ರೆ ॥ಜಾತ್ರೆ॥



## ಕಾರ್ನೀವಲ್‌ನಲ್ಲಿ ಒಂದು ದಿನ



### ಕಲಿಕಾ ಫಲಿತಗಳು

ಮಕ್ಕಳು ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ ಸರಳವಾದ "ಏನು, ಯಾಕೆ, ಹೇಗೆ ಮತ್ತು ಯಾವಾಗ'ಎಂಬ ಪ್ರಶ್ನೆಗಳನ್ನು ಹಾಗೂ ನೆನಪಿಸಿಕೊಳ್ಳುವ ಮತ್ತು ಊಹಿಸಿ ಉತ್ತರಿಸುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಉತ್ತರಿಸುತ್ತಾರೆ.

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ




### ಕಥೆಯ ಸಂಕ್ಷಿಪ್ತ ರೂಪ

**"ಕಾರ್ನೀವಲ್‌ನಲ್ಲಿ ಒಂದು ದಿನ" (ಜಾತ್ರೆ/ಉತ್ಸವ)**

ಒಂದು ದಿನ ಮೂರು ಇಲಿ ಸಹೋದರರು ಊರ ಜಾತ್ರೆಗೆ ಹೋಗಲು ಬಯಸಿದರು. ಅದರ ಬಗ್ಗೆ ಮಾತನಾಡುವಾಗ ಅಲ್ಲಿಯೇ ಇದ್ದ ಇಲಿಯ ಕೊನೆಯ ತಮ್ಮ ತನ್ನನ್ನೂ ಜಾತ್ರೆಗೆ ಕರೆದುಕೊಂಡು ಹೋಗಬೇಕೆಂದು ಹಠ ಮಾಡುತ್ತಾನೆ. ಅಲ್ಲಿ ಅವರು ಆಟಿಕೆ ಕಾರುಗಳನ್ನು ಓಡಿಸುತ್ತಾರೆ, ಸುತ್ತಲೂ ತಿರುಗುವ ಚಕ್ರ (ರೌಂಡ್ & ರೌಂಡ್) ಹಾಗೂ ಮೇಲಿಂದ ಕೆಳಗೆ ತಿರುಗುವ (ಫೆರಿಸ್) ತೊಟ್ಟಿಲಿನಲ್ಲೂ ಹೋಗುತ್ತಾರೆ. ಬಲೂನ್ ಅಂಗಡಿಗೆ ಹೋಗುತ್ತಾರೆ ಮತ್ತು ಮೂರು ಬಲೂನ್ ಖರೀದಿಸುತ್ತಾರೆ ಅದಾದ ನಂತರ ತಮ್ಮ ಕಿರಿಯ ಸಹೋದರ ಇಲಿ ಕಾಣೆಯಾಗಿದ್ದಾನೆ ಎಂದು ಅವರಿಗೆ ತಿಳಿಯುತ್ತದೆ. ಸಣ್ಣ ಇಲಿ ಎಲ್ಲಿ ಹೋಯಿತು ಎಂದು ಹುಡುಕುತ್ತಾ ಆಟಿಕೆ ಕಾರ್ ಬಳಿ ಹೋಗುತ್ತಾರೆ. ಆದರೆ ಅಲ್ಲಿ ಸಣ್ಣ ಇಲಿ ಇರುವುದಿಲ್ಲ. ನಂತರ ಮೆರ್ರಿ–ಗೋ–ರೌಂಡ್ ಬಳಿ ಹೋಗುತ್ತಾರೆ ಅಲ್ಲಿಯೂ ಸಣ್ಣ ಇಲಿ ಇರುವುದಿಲ್ಲ. ಕ್ಯಾಟರ್ ಪಿಲ್ಲರ್ ಸವಾರಿ ಬಳಿ ಹೋಗಿ ನೋಡುತ್ತಾರೆ ಅಲ್ಲಿಯೂ ಇರುವುದಿಲ್ಲ. ಫೆರ್ರಿಸ್ ಚಕ್ರದ ಬಳಿ ಹೋಗುತ್ತಾರೆ ಹೋ ದೇವರೆ ಸಣ್ಣ ಇಲಿ ಇಲ್ಲೇ ಇದೆ ಎಂದು ಖುಷಿಯಾಗುತ್ತಾರೆ. ನಂತರ ಮೂವರು ಇಲಿ ಸಹೋದರರು ಒಂದೊಂದು ಲೋಟ ಕಬ್ಬಿನ ಜ್ಯೂಸ್/ಪಾನೀಯವನ್ನು ಖರೀದಿಸುತ್ತಾರೆ. ವಾಃಹ್ ಎಂತಹ ಅದ್ಭುತ ದಿನ ಎಂದು ಅಲ್ಲಿಂದ ಎಲ್ಲರೂ ಹೊರಡುತ್ತಾರೆ.

### ಸೂಚನೆಗಳು

**ಹಂತ 1:** ಕಥೆಯನ್ನು ಪರಿಚಯಿಸಿ: ವಿಷಯದ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು, ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು ಮತ್ತು ಕೆಲವು ಚರ್ಚೆಯೊಂದಿಗೆ ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು.

**ಹಂತ 2:** ಮುಖದ ಹಾವಭಾವ ಮತ್ತು ಧ್ವನಿಯ ಏರಿಳಿತಗಳನ್ನು ಬಳಸಿ ನಿಮ್ಮದೇ ವಾಕ್ಯಗಳಲ್ಲಿ ಕಥೆಯನ್ನು ಹೇಳುವುದು.

**ಹಂತ 3:** ಕಥೆಯಲ್ಲಿರುವ ಪ್ರಮುಖ ಪಾತ್ರಗಳು ಮತ್ತು ಸನ್ನಿವೇಶಗಳ ಕಡೆ ಗಮನ ಸೆಳೆಯುವುದು. ಕಥೆಯನ್ನು ಓದುತ್ತಾ ಮುಖ್ಯ ಪದಗಳನ್ನು ವಿವರಿಸುತ್ತಾ, ಅದಕ್ಕೆ ಸಂಬಂಧಿಸಿದ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು.

## ಕಾರ್ನೀವಲ್‌ನಲ್ಲಿ ಒಂದು ದಿನ



ಉದಾಹರಣೆ:

- ಒಂದು ದಿನ ಮೂರು ಇಲಿ ಸಹೋದರರು ಊರ ಜಾತ್ರೆಗೆ ಹೋಗಲು ಬಯಸಿದರು – ಇಲಿ ಸಹೋದರರು ಎಲ್ಲಿಗೆ ಹೋಗಲು ಬಯಸಿದರು?
- ಇಲಿಯ ಕೊನೆಯ ತಮ್ಮ ತನ್ನನ್ನೂ ಜಾತ್ರೆಗೆ ಕರೆದುಕೊಂಡು ಹೋಗಬೇಕೆಂದು ಹಠ ಮಾಡುತ್ತಾನೆ – ಇಲಿಯ ಕೊನೆಯ ತಮ್ಮ ಯಾವುದಕ್ಕೆ ಹಠ ಮಾಡುತ್ತಾನೆ?
- ಹೆಚ್ಚಿನ ಆತಂಕದ ನಂತರ ಅವರು ಅವನನ್ನು ಮೇಲಿಂದ ಕೆಳಗೆ ತಿರುಗುವ (ಫೆರಿಸ್) ತೊಟ್ಟಿಲು ಬಳಿ ಕಂಡುಕೊಳ್ಳುತ್ತಾರೆ. – ಅವರು ತಮ್ಮ ಸಹೋದರನನ್ನು ಎಲ್ಲಿ ಕಂಡುಕೊಂಡರು?
- ಸಹೋದರರು ಬಲೂನ್ ಅಂಗಡಿಗೆ ಹೋಗುತ್ತಾರೆ. ಮತ್ತು ಪ್ರತಿಯೊಬ್ಬರೂ ಬಲೂನ್ ಖರೀದಿಸುತ್ತಾರೆ. – ಅಂಗಡಿಯಲ್ಲಿ ಏನು ಖರೀದಿಸಿದರು?
- ಅವರು ಮೆರಿ–ಗೋ–ರೌಂಡ್ (ಸುತ್ತಲೂ ತಿರುಗುವ ಚಕ್ರ) ಕಡೆ ಓಡುತ್ತಾರೆ. ಆದರೆ ಸಣ್ಣ ಇಲಿ ಅಲ್ಲಿ ಇರುವುದಿಲ್ಲ – ಮೆರಿ–ಗೋ–ರೌಂಡ್ (ಸುತ್ತಲೂ ತಿರುಗುವ ಚಕ್ರ) ಹತ್ತಿರ ಸಣ್ಣ ಇಲಿ ಇದೆಯೇ?

**ಹಂತ 4:** ಕಥೆಯ ಕೊನೆಯಲ್ಲಿ ಮಕ್ಕಳಿಗೆ ಸರಳವಾದ ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳು ಉದಾಹರಣೆ:

- ಮೂವರು ಸಹೋದರರು ಎಲ್ಲಿಗೆ ಹೋಗಲು ಬಯಸಿದರು?
- ಸಣ್ಣ ಇಲಿಗೆ ಯಾವುದರ ಬಗ್ಗೆ ಚಿಂತೆ ಇತ್ತು?
- ಸಹೋದರರು ಎಷ್ಟು ಬಲೂನ್‌ಗಳನ್ನು ಖರೀದಿಸುತ್ತಾರೆ?
- ಎಷ್ಟು ಬಾರಿ ಸಣ್ಣ ಇಲಿಯನ್ನು ಸಹೋದರರು ಕಳೆದುಕೊಂಡರು?
- ಸಹೋದರರು ಸಣ್ಣ ಇಲಿ ಎಲ್ಲಿದೆ ಎಂದು ಕಂಡುಕೊಂಡರು?

**ಹಂತ 5:** ಕಥೆಯ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳಿ ಮತ್ತು ಕಥೆಯ ಪ್ರಮುಖ ವಿಚಾರಗಳ ಕುರಿತು ಚರ್ಚಿಸಿ. ತಾರ್ಕಿಕ ಪ್ರಶ್ನೆಗಳನ್ನು ಕೇಳುವುದು. ತಾರ್ಕಿಕ ಪ್ರಶ್ನೆಗಳು ಉದಾಹರಣೆ:

- ಸಣ್ಣ ಇಲಿಯು ನಿಜವಾಗಿಯೂ ಯಾವ ಆಟವನ್ನು ಇಷ್ಟಪಟ್ಟಿದೆ ಎಂದು ನೀವು ಭಾವಿಸುತ್ತೀರಿ? ನೀನು ಯಾಕೆ ಆ ರೀತಿ ಯೋಚಿಸುವೆ?
- ಒಂದುವೇಳೆ ನೀವು ಸಣ್ಣ ಇಲಿಯ ಸಹೋದರರಾಗಿದ್ದರೆ ನೀವು ಏನು ಮಾಡುತ್ತಿದ್ದಿರಿ?
- ಮೂರು ಇಲಿಗಳು ವಿಭಿನ್ನವಾಗಿ ಏನು ಮಾಡಬೇಕಿತ್ತು ಎಂದು ನಿಮಗೆ ಅನಿಸುತ್ತಿದೆ?

**ಹಂತ 6:** ಕಥೆಯ ಪಾತ್ರಗಳೊಂದಿಗೆ ಮಕ್ಕಳು ಇತರರ ಭಾವನೆ ಮತ್ತು ಅನುಭವಗಳನ್ನು ಹೊಂದಲು ಅಗತ್ಯವಿರುವ ಸರಳ ಪ್ರಶ್ನೆಗಳನ್ನು ಕೇಳುವುದು.

- ಸಣ್ಣ ಇಲಿಯನ್ನು ನೋಡದಿದ್ದಾಗ ಇತರೆ ಇಬ್ಬರು ಸಹೋದರರು ಹೇಗೆ ಭಾವಿಸಿದರು ಎಂದು ನೀವು ಭಾವಿಸುತ್ತೀರಿ?
- ಸಣ್ಣ ಇಲಿಯನ್ನು ಕಂಡುಕೊಂಡಾಗ ಅವರು ಹೇಗೆ ಭಾವಿಸಿದರು ಎಂದು ನೀವು ಭಾವಿಸುತ್ತೀರಿ?
- ಸಣ್ಣ ಇಲಿಯು ತನ್ನ ಇಬ್ಬರು ಸಹೋದರರನ್ನು ಕಳೆದುಕೊಂಡಿರುವುದರ ಬಗ್ಗೆ ಚಿಂತಿತನಾಗಿದ್ದನೆಂದು ನೀವು ಭಾವಿಸುತ್ತೀರಾ? ಏಕೆ ಹಾಗೆ ನೀವು ಯೋಚಿಸುತ್ತೀರಿ?

**ಹಂತ 7:** 2–4 ವಾಕ್ಯಗಳಲ್ಲಿ ಕಥೆಯನ್ನು ತಮ್ಮದೇ ಮಾತುಗಳಲ್ಲಿ ನಿರೂಪಿಸಲು ಮಕ್ಕಳಿಗೆ ಸಹಾಯ ಮಾಡುವುದು.

### ಚಟುವಟಿಕೆ 1

## ಹೆಬ್ಬೆರಳಿನ ಮುದ್ರಣ



### ಕಲಿಕಾ ಸಾಮಗ್ರಿಗಳು

ಹೆಬ್ಬೆರಳ ಮುದ್ರಣವನ್ನು ಒತ್ತುವ ಮೂಲಕ ವಿವಿಧ ಆಕಾರಗಳನ್ನು ಮಾಡುವುದು.

### ಕಲಿಕಾ ಸಾಮಗ್ರಿಗಳು

ಬಿಳಿಯ ಹಾಳೆಗಳು, ನೀರಿನಲ್ಲಿ ಕರಗುವ ಬಣ್ಣಗಳು (ವಾಟರ್ ಕಲರ್ಸ್), ತಟ್ಟೆ ಬಣ್ಣವನ್ನು ಹಾಕಲು, ಮತ್ತು ಪೆನ್ಸಿಲ್.

### ಶಿಕ್ಷಕರ ಪೂರ್ವ ಸಿದ್ಧತೆ


ಸರಳವಾದ ರೇಖಾಚಿತ್ರವನ್ನು ಹಾಳೆಯಲ್ಲಿ ಬಿಡಿಸುವುದು, ಮತ್ತು ಬಣ್ಣಗಳನ್ನು ಸಿದ್ಧಮಾಡಿಟ್ಟುಕೊಳ್ಳುವುದು.

### ಸೂಚನೆಗಳು

1. ಮಕ್ಕಳನ್ನು 3–4 ಗುಂಪುಗಳಾಗಿ ವಿಂಗಡಿಸುವುದು. ರೇಖಾಚಿತ್ರಗಳನ್ನು ಪ್ರತಿಯೊಂದು ಮಗುವಿಗೂ ಕೊಡುವುದು.
2. ಎರಡು–ಮೂರು ಬಣ್ಣಗಳನ್ನು ಒಂದು ತಟ್ಟೆಯಲ್ಲಿಟ್ಟು ಪ್ರತಿಯೊಂದು ಗುಂಪಿಗೂ ಕೊಡುವುದು. ಅವರ ಹೆಬ್ಬೆರಳನ್ನು ಬಣ್ಣದಲ್ಲಿ ಅದ್ದುವಂತೆ ಹೇಳುವುದು.
3. ಬಣ್ಣದಲ್ಲಿ ಅದ್ದಿದ ಹೆಬ್ಬೆರಳನ್ನು ರೇಖಾಚಿತ್ರದ ಒಳಗೆ ಒತ್ತುವಂತೆ ಹೇಳುವುದು. ಮಕ್ಕಳಿಗೆ ಈ ಚಟುವಟಿಕೆಯನ್ನು ಹೇಗೆ ಮಾಡಬೇಕೆಂದು ತೋರಿಸಿಕೊಡುವುದು. ನಂತರ ಮಕ್ಕಳ ಕೈಗಳನ್ನು ಸ್ವಚ್ಛವಾಗಿ ಸೋಪಿನಿಂದ ತೊಳೆಯುವುದು.

### ಚಟುವಟಿಕೆ 2

## ಪೇಪರ್ ಅಂಟಿಸುವುದು



### ಕಲಿಕಾ ಸಾಮಗ್ರಿಗಳು

ಬಿಳಿಯ ಹಾಳೆಗಳು, ಬಣ್ಣದ ಪೇಪರ್, ಅಂಟು,

### ಶಿಕ್ಷಕರ ಪೂರ್ವ ಸಿದ್ಧತೆ

ಸರಳವಾದ ಚಿತ್ರಗಳ ರೇಖಾಚಿತ್ರವನ್ನು ಹಾಳೆಯಲ್ಲಿ ಬಿಡಿಸುವುದು, ಮತ್ತು ಬಣ್ಣದ ಪೇಪರ್‌ನ್ನು ಸಿದ್ಧಮಾಡಿಟ್ಟುಕೊಳ್ಳುವುದು.

### ಸೂಚನೆಗಳು

1. ಮಕ್ಕಳಿಗೆ ಅಗತ್ಯವಿರುವ ಸಾಮಗ್ರಿಗಳನ್ನು ನೀಡುವುದು ಮತ್ತು 2 ವಿಭಿನ್ನ ಗಾತ್ರದ 4 ಮೂಲ ಆಕಾರಗಳ ಚಿತ್ರಣಗಳನ್ನು ನೀಡಿ ಅದರೊಳಗೆ ಕಾಗದದ ಸಣ್ಣ ಸಣ್ಣ ಚೂರುಗಳನ್ನು ಅಂಟಿಸಲು ಹೇಳುವುದು.
2. ಅಗತ್ಯವಿದ್ದಲ್ಲಿ ಶಿಕ್ಷಕಿ ಮಕ್ಕಳಿಗೆ ಸಹಾಯ ಮಾಡುವುದು.

ಚಟುವಟಿಕೆ 3

## ಚಿತ್ರ ಬಿಡಿಸುವುದು



### ಕಲಿಕಾ ಸಾಮಗ್ರಿಗಳು

ಬಿಳಿಯ ಹಾಳೆಗಳು, ಬಣ್ಣದ ಪೆನ್ಸಿಲ್, ಪೆನ್ಸಿಲ್

### ಸೂಚನೆಗಳು

1. ಪ್ರತೀ ಮಗುವಿಗೂ ಬಿಳಿಯ ಹಾಳೆ ಮತ್ತು ಬಣ್ಣದ ಪೆನ್ಸಿಲ್‌ನ್ನು ಕೊಡುವುದು.
2. ಮಕ್ಕಳಿಗೆ ತಾವು ಹೊರಗಿನ ಪ್ರಕೃತಿಯಲ್ಲಿ ನೋಡಿದ ಯಾವುದಾದರೂ ಇಷ್ಟವಾದ ಚಿತ್ರಗಳನ್ನು ತಮ್ಮದೇ ಅನಿಸಿಕೆಯಲ್ಲಿ ಬಿಡಿಸಲು ಹೇಳುವುದು.
3. ಈ ಚಟುವಟಿಕೆ ಮುಗಿದ ನಂತರ, ಪ್ರತೀ ಮಗುವಿನ ಬಳಿ ಹೋಗಿ ಅವಳು/ನು ಬಿಡಿಸಿದ ಚಿತ್ರದ ಬಗ್ಗೆ ವಿವರಿಸುವಂತೆ ಪ್ರೋತ್ಸಾಹಿಸುವುದು.

ಚಟುವಟಿಕೆ 4

## ಮಣಿ ಪೋಣಿಸುವುದು



### ಕಲಿಕಾ ಸಾಮಗ್ರಿಗಳು

ದಾರ, ಮಣಿಗಳು

### ಸೂಚನೆಗಳು

1. ಪ್ರತೀ 2 ಮಕ್ಕಳಂತೆ ಗುಂಪು ಮಾಡಿ 2 ವಿಭಿನ್ನ ಬಣ್ಣಗಳ ಮಣಿಗಳನ್ನು ಪೋಣಿಸಲು ಕೊಡುವುದು ಮತ್ತು ಪ್ರತೀ ಗುಂಪಿಗೂ ದಾರವನ್ನು ಕೊಡುವುದು.
2. ಒಂದು ಮಗು ದಾರದ ಒಂದು ತುದಿಯಿಂದ ಮಣಿಗಳನ್ನು ದಾರದ ಮಧ್ಯದ ಭಾಗದವರೆಗೆ ಪೋಣಿಸುವಂತೆ ತಿಳಿಸುವುದು.
3. ಮಗು ನಿಧಾನವಾಗಿ ಮಣಿಯ ರಂಧ್ರದಲ್ಲಿ ದಾರವನ್ನು ಹಾಕುವುದರ ಮೂಲಕ ಕೊಟ್ಟಿರುವ ಮಣಿಗಳನ್ನು ಪೋಣಿಸುತ್ತಾ ಹೋಗುವುದು.
4. ಇದೇ ಮಾದರಿಯಲ್ಲಿ ಮತ್ತೊಂದು ಮಗುವೂ ಕೂಡ ಮಣಿಗಳನ್ನು ಮತ್ತೊಂದು ತುದಿಯಿಂದ ಪೋಣಿಸುವುದು.
5. ಈ ಪ್ರಕ್ರಿಯೆ ಎಲ್ಲಾ ಮಣಿಗಳು ಪೂರ್ಣಗೊಳ್ಳುವವರೆಗೂ ಮುಂದುವರೆಸುವುದು.
6. ನಂತರ ಮಕ್ಕಳು ಈ ಪ್ರಕ್ರಿಯೆಯನ್ನು ಪುನಃ ಮತ್ತೊಂದು 2 ವಿಭಿನ್ನ ಬಣ್ಣಗಳ ಮಣಿಗಳಿಂದ ಮುಂದುವರೆಸುವುದು.
7. ಅಗತ್ಯವಿದ್ದಲ್ಲಿ ಶಿಕ್ಷಕಿ ಸಹಾಯ ಮಾಡುವುದು.

## ಚಟುವಟಿಕೆ 1

## ನೆನಪಿನ ಆಟ

### ಕಲಿಕಾ ಸಾಮಗ್ರಿಗಳು

ಒಂದೇ ಚಿತ್ರವಿರುವ ಜೋಡಿ ಕಾರ್ಡ್‌ಗಳು/ಜೋಡಿ ಆಕಾರಗಳು

### ಸೂಚನೆಗಳು

1. ಟೇಬಲ್ ಮೇಲೆ ಚಿತ್ರವಿರುವ ಜೋಡಿ ಕಾರ್ಡ್‌ಗಳು/ಜೋಡಿ ಆಕಾರಗಳ ಚಿತ್ರಗಳನ್ನು ಕಾಣಿಸದ ಹಾಗೆ ಮಡಚಿ ಇಡುವುದು.
2. ಪ್ರತೀ ಕಾರ್ಡ್‌ಗಳ ಮಧ್ಯೆ ಸಾಕಷ್ಟು ಸ್ಥಳವಿರುವುದು. ಒಂದು ಮಗುವನ್ನು ಹತ್ತಿರ ಕರೆದು ಯಾವುದಾದರು ಒಂದು ಕಾರ್ಡ್‌ಗನ್ನು ತೆಗೆಯಲು ಹೇಳಿ.
3. ಅದೇ ರೀತಿ ಚಿತ್ರ ಅಥವಾ ಆಕಾರವಿರುವ ಮತ್ತೊಂದು ಕಾರ್ಡ್‌ನ್ನು ತೆಗೆಯಲು ಹೇಳಿ.
4. ಅದು ಹೊಂದಾಣಿಕೆ ಅಗದೆ ಇದ್ದಲ್ಲಿ ಆ ಕಾರ್ಡ್‌ನ್ನು ಅದೇ ಸ್ಥಳದಲ್ಲಿ ಇರಿಸಲು ಹೇಳಿ.
5. ಪ್ರತೀ ಮಗುವಿಗೆ 2–3 ಬಾರಿ ಅವಕಾಶವನ್ನು ನೀಡಿ, ಸರಿಯಾದ ಚಿತ್ರವನ್ನು ಸರಿಯಾಗಿ ಹೊಂದಿಸಲು ಮಕ್ಕಳಿಗೆ ಪ್ರೋತ್ಸಾಹಿಸುವುದು.

## ಚಟುವಟಿಕೆ 2

## ಚೆಂಡಿನ ಆಟ



**ಕಲಿಕಾ ಸಾಮಗ್ರಿಗಳು:** ಮೃದುವಾದ ಚಂಡು

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲುವಂತೆ ಅಥವಾ ಕುಳಿತುಕೊಳ್ಳುವಂತೆ ಹೇಳುವುದು.
2. ಪ್ರತೀ ಮಗುವಿಗೆ ಆ ದಿನದ ವಿಷಯಕ್ಕೆ ಸಂಬಂಧಿಸಿದಂತೆ ಹೆಸರುಗಳನ್ನು ಇಡುವುದು. ಅಥವಾ ಮಗುವಿನ ಹೆಸರೇ ಕರೆಯುವುದು.
3. ಒಂದು ಮಗುವಿಗೆ ಚೆಂಡನ್ನು ಕೊಟ್ಟು ವೃತ್ತದಲ್ಲಿರುವ ಬೇರೆ ಮಗುವನ್ನು ಕೊಟ್ಟಿರುವ ಹೆಸರಿನಿಂದ ಕರೆಯುವಂತೆ ಹೇಳುವುದು.
4. ಆ ಮಗುವಿಗೆ ಚೆಂಡನ್ನು ಎಸೆಯುವಂತೆ ಹೇಳುವುದು. ಯಾರು ಚೆಂಡನ್ನು ಹಿಡಿಯುತ್ತಾರೋ ಆ ಮಗು ಪುನಃ ಮೊದಲ ಮಗು ಮಾಡಿದ ಮಾದರಿಯಂತೇ ಮುಂದುವರೆಸುವುದು.
5. ಆಟ ಆಡುವಾಗ ಮಕ್ಕಳಿಗೆ ನಿಧಾನವಾಗಿ ಆಡುವಂತೆ ಪ್ರಾರಂಭಿಸಿ ನಂತರ ಎಸೆಯುವ ವೇಗವನ್ನು ಹೆಚ್ಚಿಸುತ್ತಾ ಹೋಗುವುದು.
6. ಹೀಗೆ ಎಲ್ಲಾ ಮಕ್ಕಳಿಗೆ ಅವಕಾಶ ಸಿಗುವಂತೆ ಶಿಕ್ಷಕಿ ನೋಡಿಕೊಳ್ಳುವುದು.

ಚಟುವಟಿಕೆ 3

# ಸಿಂಪು ಹೇಳುತ್ತದೆ . . . .

## ಕಲಿಕಾ ಸಾಮಗ್ರಿಗಳು

ತೊಗಲು ಗೊಂಬೆಗಳು, ಗೊಂಬೆಗಳು

## ಸೂಚನೆಗಳು

1. ಮಕ್ಕಳಿಗೆ ತೊಗಲು ಗೊಂಬೆ / ಗೊಂಬೆಯನ್ನು ಸಿಂಪು ಎಂದು ಪರಿಚಯಿಸಿ. ಆಟವನ್ನು ಪ್ರಾರಂಭಿಸುವ ಮೊದಲು ಶಿಕ್ಷಕಿ ಮಕ್ಕಳಿಗೆ ಹೇಳಬೇಕು.
2. ನಾನು ತನ್ನ ಹೇಳಿಕೆಯನ್ನು ನೀಡುವ ಮೊದಲು "ಸಿಂಪು ಹೇಳುತ್ತಾರೆ. . . ."ಎಂದು ಹೇಳಿದಾಗ ಮಾತ್ರ ಮಕ್ಕಳು ಮಾಡಬೇಕು.
3. ಪ್ರಾರಂಭದಲ್ಲಿ "ಸಿಂಪು ಹೇಳುತ್ತಾರೆ" ಎಂಬ ಪದ ಬಳಕೆ ಮಾಡದೆ ತನ್ನ ಹೇಳಿಕೆಯನ್ನು ನೀಡಿದರೆ ಮಕ್ಕಳು ಮಾಡದೆ ಸುಮ್ಮನೆ ನಿಲ್ಲಬೇಕು. ಉದಾಹರಣೆಗೆ: "ಸಿಂಪು ಹೇಳುತ್ತಾರೆ ಎಲ್ಲರೂ ಒಂಟಿ ಕಾಲಿನಲ್ಲಿ ಒಂದು ಬಾರಿ ಜಿಗಿಯಿರಿ." ಎಂದು ಹೇಳಿದಾಗ ಮಕ್ಕಳು ಒಂದು ಬಾರಿ ಜಿಗಿಯಬೇಕು.
4. "ಎಲ್ಲರೂ ಒಂಟಿ ಕಾಲಿನಲ್ಲಿ ಒಂದು ಬಾರಿ ಜಿಗಿಯಿರಿ" ಎಂದಾಗ ಮಕ್ಕಳು ಸುಮ್ಮನೆ ನಿಲ್ಲಬೇಕು. ಮಕ್ಕಳಿಗೆ ಇದು ತಿಳಿಯಲು ಆರಂಭದಲ್ಲಿ ಶಿಕ್ಷಕಿ ಒಂದೆರಡು ಬಾರಿ ಮಾಡಿ ತೋರಿಸಬೇಕು.
5. ಹೀಗೆ ಆಟದಲ್ಲಿ ಹಲವಾರು ಹೇಳಿಕೆಯನ್ನು ನೀಡಬಹುದು. ಅಂದರೆ (ವೃತ್ತದಲ್ಲಿ ಓಡಿ, 2 ಕಾಲಿನಿಂದ ಮೇಲಕ್ಕೆ ಜಿಗಿಯಿರಿ, ನೃತ್ಯ ಮಾಡಿ, ಕುಳಿತುಕೊಳ್ಳಿ, ನಿಂತುಕೊಳ್ಳಿ, ಎರಡು ಕೈ ಮೇಲೆ ಮಾಡಿ, ಚಪ್ಪಾಳೆ ತಟ್ಟಿ. ನಗುವ ಹಾಗೆ ನಟಿಸಿ, ಅಳುವ ಹಾಗೆ ನಟಿಸಿ. ಇತ್ಯಾದಿ.)




### ಚಟುವಟಿಕೆ 1

## ನಿಂಬೆಹಣ್ಣು ಮತ್ತು ಚಮಚದೊಂದಿಗೆ ಓಟ



### ಕಲಿಕಾ ಸಾಮಗ್ರಿಗಳು

ಚಮಚ ಮತ್ತು ನಿಂಬೆಹಣ್ಣು





### ಸೂಚನೆಗಳು

1. 3–4 ಮಕ್ಕಳನ್ನು ಸಾಲಿನಲ್ಲಿ ನಿಲ್ಲಿಸುವುದು. ಮಕ್ಕಳಿಗೆ ಎಲ್ಲಿಂದ ಓಟ ಪ್ರಾರಂಭಿಸಿ, ಅಂತಿಮವಾಗಿ ಎಲ್ಲಿ ಕೊನೆಗೊಳ್ಳಬೇಕು ಎಂಬುದನ್ನು ಮೊದಲೇ ಪರಿಚಯಿಸುವುದು.
2. ಚಮಚದಲ್ಲಿ ನಿಂಬೆಹಣ್ಣು ಇಟ್ಟು, ಬಾಯಲ್ಲಿ ಹಿಡಿದು ಸಮತೋಲನದಿಂದ ಓಡಲು ಮಗುವಿಗೆ ಹೇಳುವುದು.
3. ಓಡುವಾಗ ಚಮಚದಿಂದ ನಿಂಬೆಹಣ್ಣು ಬಿದ್ದರೆ ಸ್ಪರ್ಧೆಯಿಂದ ಔಟ್ ಎಂದು ಹೇಳುವುದು. ಯಾರು ಸ್ಪರ್ಧೆಯನ್ನು ಪೂರ್ಣಗೊಳಿಸುತ್ತಾರೋ ಆ ಮಗುವಿಗೆ ಚಪ್ಪಾಳೆ ಮೂಲಕ ಪ್ರೋತ್ಸಾಹಿಸುವುದು.

### ಚಟುವಟಿಕೆ 2

## ಜಿಗಿತದ ಓಟ

### ಕಲಿಕಾ ಸಾಮಗ್ರಿಗಳು

ಓಟದ ಗೆರೆಗಳು

### ಸೂಚನೆಗಳು

ನೆಲದ ಮೇಲೆ ಓಡಲು 10 ಅಡಿಯ ದೂರದಷ್ಟು ಓಟದ ನಿಗದಿತ ಗೆರೆಗಳನ್ನು (ಟ್ರ್ಯಾಕ್) ಹಾಕುವುದು. 3–4 ಮಕ್ಕಳನ್ನು ಸಾಲಿನಲ್ಲಿ ನಿಲ್ಲಿಸುವುದು. ಮಕ್ಕಳಿಗೆ ಎಲ್ಲಿಂದ ಓಟ ಪ್ರಾರಂಭಿಸಿ, ಅಂತಿಮವಾಗಿ ಎಲ್ಲಿ ಕೊನೆಗೊಳ್ಳಬೇಕು ಎಂಬುದನ್ನು ಮೊದಲೇ ಶಿಕ್ಷಕಿ ಪರಿಚಯಿಸುವುದು. ಮಕ್ಕಳು ತಮ್ಮ ತಮ್ಮ ಸಾಲಿನಲ್ಲಿ ಎರಡು ಕಾಲುಗಳಿಂದ ಒಟ್ಟಿಗೆ ಜಿಗಿಯುತ್ತಾ ತಮ್ಮ ಗುರಿಯನ್ನು ತಲುಪಬೇಕು. ಯಾರು ಸ್ಪರ್ಧೆಯನ್ನು ಪೂರ್ಣಗೊಳಿಸುತ್ತಾರೋ ಆ ಮಗುವಿಗೆ ಚಪ್ಪಾಳೆ ಮೂಲಕ ಪ್ರೋತ್ಸಾಹಿಸುವುದು. ಎಲ್ಲಾ ಮಕ್ಕಳಿಗೂ ಈ ಅವಕಾಶ ಸಿಗುವಂತೆ ನೋಡಿಕೊಳ್ಳುವುದು.

### ಚಟುವಟಿಕೆ 3

## ಕುಂಟೆಬಿಲ್ಲೆ



### ಸೂಚನೆಗಳು

ಚಿತ್ರದಲ್ಲಿ ಕಾಣುವಂತೆ ಶಿಕ್ಷಕಿ ನೆಲದ ಮೇಲೆ ಸೀಮೆಸುಣ್ಣದಿಂದ ಕುಂಟೆಬಿಲ್ಲೆಯ ವಿನ್ಯಾಸ/ಮಾದರಿಯನ್ನು ರಚಿಸುವುದು. ಮಕ್ಕಳಿಗೆ ಅಕ್ಕ–ಪಕ್ಕ ಇರುವ 2 ಚೌಕವನ್ನು ಹೊರತುಪಡಿಸಿ ಉಳಿದ ಎಲ್ಲಾ ಚೌಕದ ಒಳಗೆ ಒಂಟಿ ಕಾಲಿನಲ್ಲಿ ಜಿಗಿಯಲು ಹೇಳುವುದು. ಎರಡು ಅಕ್ಕ–ಪಕ್ಕ ಚೌಕದ ಒಳಗೆ ಮಾತ್ರ ತನ್ನ ಎರಡು ಕಾಲುಗಳನ್ನು ಕೆಳಗೆ ಇಡಬಹುದು. ಹೀಗೆ ಮಗು ಜಿಗಿಯುತ್ತಾ ತಮ್ಮ ಕೊನೆಯ ಹಂತವನ್ನು ತಲುಪಬೇಕು. ಪುನಃ ಮೊದಲಿನ ಸ್ಥಳಕ್ಕೆ ಹಿಂದಿರುಗಿ ಬರಬೇಕು ಆದರೆ ಎಲ್ಲೂ ಗೆರೆಯನ್ನು ಸ್ಪರ್ಶಿಸಬಾರದು/ತುಳಿಯಬಾರದು. ಹೀಗೆ ಯಾರು ಸ್ಪರ್ಧೆಯನ್ನು ಪೂರ್ಣಗೊಳಿಸುತ್ತಾರೆಯೋ ಆ ಮಗುವಿಗೆ ಚಪ್ಪಾಳೆ ಮೂಲಕ ಪ್ರೋತ್ಸಾಹಿಸುವುದು. ಎಲ್ಲಾ ಮಕ್ಕಳಿಗೂ ಈ ಅವಕಾಶ ಸಿಗುವಂತೆ ನೋಡಿಕೊಳ್ಳುವುದು.

# ಸ್ಥಳೀಯ ಜಾತ್ರೆಗಳು

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು

1. Draw a circle in the air
2. Draw a triangle in the air
3. Draw a square in the air

1. Draw a circle in the air
2. Draw a triangle in the air
3. Draw a square in the air

1. Draw a circle in the air
2. Draw a triangle in the air
3. Draw a square in the air

1. Draw two circles in the air
2. Make 2 circles with your thumb and finger
3. Make a diamond with your fingers

1. Draw two circles in the air
2. Make 2 circles with your thumb and finger
3. Make a diamond with your fingers

1. Draw two circles in the air
2. Make 2 circles with your thumb and finger
3. Make a diamond with your fingers

Say
gesture
model

1. Draw a circle in the air
2. Draw a triangle in the air
3. Draw a square in the air
4. Draw two circles in the air
5. Make 2 circles with your thumb and finger
6. Make a diamond with your fingers

1. Make a diamond with your fingers
2. Make 2 circles with your thumb and finger
3. Draw two circles in the air
4. Draw a square in the air
5. Draw a triangle in the air
6. Draw a circle in the air





ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ

# ರಾಷ್ಟ್ರೀಯ/ರಾಜ್ಯದ ಚಿಹ್ನೆಗಳು ಮತ್ತು ಹಬ್ಬಗಳು



# ಕಲಿಕಾ ಫಲಿತಗಳು

## ಉಪವಿಷಯ 3.3: ರಾಷ್ಟ್ರೀಯ/ರಾಜ್ಯದ ಚಿಹ್ನೆಗಳು ಮತ್ತು ಹಬ್ಬಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 "ಭಾರತೀಯ" ಪರಿಕಲ್ಪನೆಯನ್ನು ಗುರುತಿಸಿ ಮತ್ತು ಭೌಗೋಳಿಕ ದೃಷ್ಟಿಯಿಂದ ಇದರ ಅರ್ಥವೇನೆಂದು ಗುರುತಿಸುವುದು. | 1 ಸ್ವಾತಂತ್ರ್ಯ ದಿನ, ರಾಜ್ಯೋತ್ಸವ ಮತ್ತು ಅದರ ಮಹತ್ವವನ್ನು ಗುರುತಿಸುವುದು. | 1 ಪ್ರತಿ ರಾಷ್ಟ್ರೀಯ ದಿನದ ಮಹತ್ವನ್ನು ಗುರುತಿಸುವುದು. |
| 2 ತನ್ನ ಸ್ವಂತ ರಾಜ್ಯಕ್ಕೆ ಹೆಸರು ಮತ್ತು ಭಾಷೆ ಇದೆ ಎಂದು ಗುರುತಿಸುವುದು – ಕರ್ನಾಟಕ ಮತ್ತು ಕನ್ನಡ ರಾಜ್ಯ ಮತ್ತು ರಾಷ್ಟ್ರೀಯ ಗುರುತನ್ನು ಹೆಸರಿಸುವುದು. | 2 ರಾಷ್ಟ್ರಧ್ವಜದ ವಿನ್ಯಾಸ ಮತ್ತು ಪ್ರಾಮುಖ್ಯತೆ ಮತ್ತು ಬಣ್ಣಗಳು, ಚಿಹ್ನೆಯ ಅರ್ಥ ಮತ್ತು ಮಹತ್ವ. | 2 ರಾಷ್ಟ್ರೀಯ ಮತ್ತು ರಾಜ್ಯ ಚಿಹ್ನೆಗಳನ್ನು ಗುರುತಿಸುವುದು – ರಾಷ್ಟ್ರ ಧ್ವಜ, ರಾಷ್ಟ್ರಗೀತೆ, ರಾಜ್ಯ ಹಾಡು. |
| | 3 ಮಕ್ಕಳು ರಾಷ್ಟ್ರಧ್ವಜವನ್ನು ಗುರುತಿಸುವುದು ಮತ್ತು ಅದಕ್ಕೆ ಸರಿಯಾದ ಗೌರವ ನೀಡಿ ವಂದಿಸುವುದು. | 3 ರಾಜ್ಯ ಮತ್ತು ರಾಷ್ಟ್ರೀಯ ಘಟನೆ/ಸನ್ನಿವೇಶಗಳನ್ನು ಗುರುತಿಸಿ ಮತ್ತು ಪ್ರತ್ಯೇಕಿಸುವುದು. |
| | | 4 ವಿಷಯಕ್ಕೆ ಸಂಬಂಧಿಸಿದ ಕಥೆಗಳು ಮತ್ತು ಸತ್ಯತೆಗಳನ್ನು ಆಲಿಸುವುದು. |
| | | 5 ಕಥೆಯನ್ನು ಸರಿಯಾದ ಅನುಕ್ರಮದಲ್ಲಿ ಹೇಳುವುದು. ಘಟನೆ/ಸನ್ನಿವೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಹೆಚ್ಚಿನ ವಿವರಣೆ ಕೊಡುವುದು. ರಾಷ್ಟ್ರ/ರಾಜ್ಯ ಚಿಹ್ನೆಗಳನ್ನು ಮತ್ತು ಆ ದಿನಗಳನ್ನು ಗೌರವಿಸಲೇಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು. |

ಉಪವಿಷಯ 3.3

# ರಾಷ್ಟ್ರೀಯ/ರಾಜ್ಯದ ಚಿಹ್ನೆಗಳು ಮತ್ತು ಹಬ್ಬಗಳು



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಸ್ವಾತಂತ್ರ್ಯ ದಿನ, ರಾಜ್ಯೋತ್ಸವ ಮತ್ತು ಅದರ ಮಹತ್ವವನ್ನು ಗುರುತಿಸುವುದು.
- ರಾಷ್ಟ್ರಧ್ವಜದ ವಿನ್ಯಾಸ ಮತ್ತು ಪ್ರಾಮುಖ್ಯತೆ ಮತ್ತು ಬಣ್ಣಗಳು, ಚಿಹ್ನೆಯ ಅರ್ಥ ಮತ್ತು ಮಹತ್ವ.
- ಮಕ್ಕಳು ರಾಷ್ಟ್ರಧ್ವಜವನ್ನು ಗುರುತಿಸುವುದು ಮತ್ತು ಅದಕ್ಕೆ ಸರಿಯಾದ ಗೌರವ ನೀಡಿ ವಂದಿಸುವುದು.

ಸಂಭಾಷಣೆ 1

# ನಮ್ಮ ದೇಶ

## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಭಾರತದಿಂದ ಬಂದವರು ಮತ್ತು ಭಾರತೀಯರು ಮತ್ತು ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿದ್ದಾರೆಂದು ತಿಳಿಯುವುದು.
- ರಾಷ್ಟ್ರಧ್ವಜದ ವಿನ್ಯಾಸ ಮತ್ತು ಪ್ರಾಮುಖ್ಯತೆ, ಬಣ್ಣಗಳ ಅರ್ಥ ಧ್ವಜದ ಮಧ್ಯದಲ್ಲಿರುವ ಚಿಹ್ನೆಯನ್ನು ಅರ್ಥಮಾಡಿಕೊಳ್ಳುವುದು. (ಅಶೋಕ ಚಕ್ರ)

## ಕಲಿಕಾ ಸಾಮಗ್ರಿಗಳು

ಭಾರತದ ನಕ್ಷೆ, ರಾಷ್ಟ್ರಧ್ವಜದ ಮಾದರಿ, ಚಾರ್ಟ್‌ಪೇಪರ್, ಪೆನ್ಸಿಲ್ಸ್, ಕ್ರಯಾನ್ಸ್

## ಶಿಕ್ಷಕರ ಪೂರ್ವಸಿದ್ಧತೆಗಳು

ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

## ಸೂಚನೆಗಳು

**ಸಂಭಾಷಣೆ 1: ಭಾರತ ಮತ್ತು ಭಾರತೀಯರು**

ಒಂದು ವೇಳೆ ಮಕ್ಕಳು ಶಾಲಾಪೂರ್ವ ಶಿಕ್ಷಣಕ್ಕೆ ಹೊಸದಾಗಿ ಸೇರ್ಪಡೆಯಾಗಿದ್ದರೆ, 3–4 ವರ್ಷಗಳ ಪ್ರಮುಖ ಪರಿಕಲ್ಪನೆಯನ್ನು ಪುನರಾವರ್ತಿಸುವುದು.

1. ಹಳ್ಳಿ ಮತ್ತು ಗ್ರಾಮಪಂಚಾಯ್ತಿಯಿಂದ ಪ್ರಾರಂಭಿಸಿ – ನಮ್ಮಲ್ಲಿ ಅಂತಹ ಅನೇಕ ಹಳ್ಳಿಗಳಿವೆ – ಭಾರತವನ್ನು ರೂಪಿಸುತ್ತಾ ಹೋಗಿ.
2. ಭಾರತದ ನಕ್ಷೆ – ಅದು ಹೇಗೆ ಕಾಣುತ್ತದೆ.
3. ದೇಶ – ನಮ್ಮ ಉಡುಗೆಗಳು, ರಾಷ್ಟ್ರೀಯ ಭಾಷೆ, ನಮ್ಮ ಮಾತೃಭಾಷೆ, ನಮ್ಮ ಆಹಾರ.



## ಸಂಭಾಷಣೆ 2

# ನಮ್ಮ ರಾಷ್ಟ್ರಧ್ವಜ

1. ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಎಲ್ಲಾ ಮಕ್ಕಳು ಪರಸ್ಪರ ನೋಡಬಹುದು ಎಂದು ಖಚಿತಪಡಿಸಿಕೊಳ್ಳುವುದು.
2. ನಮ್ಮ ದೇಶದ ಧ್ವಜದ ಮಾದರಿಯನ್ನು (ರಾಷ್ಟ್ರಧ್ವಜ) ಎತ್ತಿ ಹಿಡಿಯಿರಿ. ಈ ಧ್ವಜವನ್ನು ಬೇರೆ ಎಲ್ಲಿಯಾದರೂ ಗಮನಿಸಿದ್ದೀರಾ ಎಂದು ಮಕ್ಕಳನ್ನು ಕೇಳಿ.
3. ಅವರು ಧ್ವಜದಲ್ಲಿರುವ ಬಣ್ಣಗಳನ್ನು ಹೆಸರಿಸಬಹುದೇ? ಧ್ವಜದ ಮಹತ್ವನ್ನು ವಿವರಿಸಿ – ಇದು ನಮ್ಮ ದೇಶ ಭಾರತದ ಸಂಕೇತವಾಗಿದೆ. ನಾವು ನಮ್ಮ ದೇಶವನ್ನು ಮತ್ತು ಧ್ವಜವನ್ನು ಗೌರವಿಸಬೇಕು.
4. ಮಕ್ಕಳು ಮಾತನಾಡಿದ ಮುಖ್ಯ ಅಂಶಗಳನ್ನು ಸಂಕ್ಷಿಪ್ತಗೊಳಿಸುವ ಮೂಲಕ ಸಂಭಾಷಣೆಯನ್ನು ಮುಕ್ತಾಯಗೊಳಿಸಿ.

ನಮ್ಮ ರಾಷ್ಟ್ರ ಧ್ವಜದ ಚಿತ್ರ ಬಿಡಿಸಿ

**ಚಟುವಟಿಕೆ** – ರಾಷ್ಟ್ರಧ್ವಜದ ಚಿತ್ರ ಬಿಡಿಸಿ ಮತ್ತು ಬಣ್ಣ ಹಚ್ಚಲು ಮಕ್ಕಳಿಗೆ ಹೇಳುವುದು.



## ಸಂಭಾಷಣೆ 3

# ನಮ್ಮ ದೇಶ ಭಾರತ




## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

- ಸ್ವಾತಂತ್ರ್ಯ ದಿನ ಮತ್ತು ಅದರ ಮಹತ್ವವನ್ನು ಗುರುತಿಸುವುದು.
- ರಾಷ್ಟ್ರೀಯ ಪ್ರಾಮುಖ್ಯತೆಯ ಚಿಹ್ನೆಗಳನ್ನು ಗುರುತಿಸುವುದು.
- ರಾಷ್ಟ್ರಗೀತೆಯನ್ನು ಗುರುತಿಸುವುದು ಮತ್ತು ಎದ್ದು ನಿಂತು ಗೌರವಿಸುವುದು.

## ಕಲಿಕಾ ಸಾಮಗ್ರಿಗಳು

ಚಾರ್ಟ್–ಸ್ವಾತಂತ್ರ್ಯ ದಿನದ ಚಿತ್ರಣಗಳು–(**P3.3.3–1**)

## ಶಿಕ್ಷಕರ ಪೂರ್ವಸಿದ್ಧತೆ

ಆರಂಭಿಸುವ ಮೊದಲು ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು.

## ಸೂಚನೆಗಳು

ದೊಡ್ಡ ವೃತ್ತದಲ್ಲಿ ಕುಳಿತುಕೊಳ್ಳಿ. ನೀವು ಮತ್ತು ಎಲ್ಲಾ ಮಕ್ಕಳು ಪರಸ್ಪರ ನೋಡಬಹುದು ಎಂದು ಖಚಿತಪಡಿಸಿಕೊಳ್ಳುವುದು.

ಹಂತ 1: **ಸ್ವಾತಂತ್ರ್ಯ ದಿನವನ್ನು ಗುರುತಿಸುವುದು**

ಭಾಗ 1– ಮಕ್ಕಳಿಗೆ ಬೋಧನಾ ಕಲಿಕಾ ಸಾಮಗ್ರಿಯ ಚಾರ್ಟ್‌ನ್ನು ಒಂದೊಂದಾಗಿ ರವಾನಿಸಿ ಮತ್ತು ಅವರು ಚಿತ್ರದಲ್ಲಿ ಏನನ್ನು ನೋಡಿದರು ಎಂಬುದನ್ನು ವಿವರಿಸಲು ಹೇಳಿ. ಪ್ರತಿ ಮಗು ಒಂದು ಚಿತ್ರವನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ಮಾತನಾಡಲು ಹೇಳಿ. ಮಕ್ಕಳು ಸಂಪೂರ್ಣ ವಾಕ್ಯಗಳಲ್ಲಿ ಮಾತನಾಡಲು ಅವರನ್ನು ಪ್ರೋತ್ಸಾಹಿಸುವುದು.

- ಈ ಚಿತ್ರದಲ್ಲಿ ಜನರು ಏನು ಮಾಡುತ್ತಿದ್ದಾರೆ?
- ಮಕ್ಕಳು ಏನು ಮಾಡುತ್ತಿದ್ದಾರೆ?
- ಜನರು ಯಾಕೆ ಧ್ವಜಕ್ಕೆ ವಂದಿಸುತ್ತಾರೆ?
- ಭಾರತೀಯ ಧ್ವಜದ ಬಣ್ಣಗಳು ಯಾವುವು?

ಹಂತ 2: **ರಾಷ್ಟ್ರಗೀತೆಯನ್ನು ಗುರುತಿಸಬಹುದೇ**

- ರಾಷ್ಟ್ರಗೀತೆಯನ್ನು ಗುರುತಿಸಬಹುದೇ ಮತ್ತು ಮೊದಲ ಸಾಲುಗಳು ಯಾವುವು ಕೊನೆಯ ಸಾಲು ಯಾವುದು? ಎಂದು ಮಕ್ಕಳನ್ನು ಕೇಳುವುದು.
- ನಮ್ಮ ರಾಷ್ಟ್ರಗೀತೆಗೆ ನಾವು ಹೇಗೆ ಗೌರವ ತೋರಿಸುತ್ತೇವೆ? ನಿಂತು "ಸಾವಧಾನ ಸ್ಥಿತಿಯಲ್ಲಿ" ಮತ್ತು ಸರಿಯಾಗಿ ಹಾಡುವ ಮೂಲಕ ಗೌರವ ನೀಡುವುದು.

## ಯೋಜನಾ ಕಾರ್ಯ 1

## ಪಾತ್ರಾಭಿನಯ "ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವುದು"

### ಬೋಧನಾ ಕಲಿಕಾ ಸಾಮಗ್ರಿಗಳು

ಭಾರತೀಯ ಧ್ವಜ/ಧ್ವಜದ ಮಾದರಿ

### ಸೂಚನೆಗಳು

1. ಎಲ್ಲಾ ಮಕ್ಕಳಿಗೂ ಸ್ವಾತಂತ್ರ್ಯ ದಿನಾಚರಣೆಯನ್ನು ಹೇಗೆ ಆಚರಿಸಬೇಕು ಎಂಬುದನ್ನು ವಿವರಿಸುವುದು.
2. 2–3 ಮಕ್ಕಳು ಶಿಕ್ಷಕರಾಗುವುದು.
3. ಉಳಿದವರು ವಿದ್ಯಾರ್ಥಿಗಳಾಗುವುದು.
4. ಎಲ್ಲಿ ಧ್ವಜಾರೋಹಣ ಮಾಡುವುದು ಎಂದು ಶಿಕ್ಷಕಿ ಸ್ಥಳವನ್ನು ಗುರುತಿಸಿ ಅದಕ್ಕೆ ಬೇಕಾಗುವ ವ್ಯವಸ್ಥೆ ಮಡುವುದು.
5. ನಂತರ ಶಿಕ್ಷಕರ ಪಾತ್ರವನ್ನು ನಿರ್ವಹಿಸುತ್ತಿರುವ ಮಕ್ಕಳು ಧ್ವಜಾರೋಹಣ ಮಾಡುವುದು. ಎಲ್ಲಾ ಮಕ್ಕಳು ಧ್ವಜಕ್ಕೆ ವಂದಿಸಿ.
6. ರಾಷ್ಟ್ರಗೀತೆಯನ್ನು ಹೇಳುವುದು. ಮಕ್ಕಳಿಗೆ ರಾಷ್ಟ್ರಗೀತೆಯ ಸರಿಯಾದ ಉಚ್ಚಾರಣೆ ಬಾರದಿದ್ದಲ್ಲಿ ಶಿಕ್ಷಕಿ ಹೇಳಿಕೊಡುವುದು.
7. ನಂತರ ಶಾಲೆಯ ಒಳಗೆ/ಹೊರಗೆ ಎಲ್ಲಾ ಮಕ್ಕಳು ಪಥಸಂಚಲನ ಮಾಡುವುದು.



## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

ಈ ಕೆಳಗಿನ ಶಿಶುಗೀತೆಗಳನ್ನು ಸರಿಯಾದ ಪದಗಳು, ಸರಿಯಾದ ಉಚ್ಚಾರಣೆ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವುದು.

**ಗಮನಿಸಿ:** ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ಹಬ್ಬ, ಜಾತ್ರೆ, ಆಚರಣೆಗಳು' ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವ ಸಿದ್ಧತೆಗಳು

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಸಚಿತ್ರವಾಗಿ ಶಿಶುಗೀತೆಯನ್ನು ಒಂದು ಮೂಲೆಯಲ್ಲಿ ಬರೆಯುವುದು ಮತ್ತು ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ, ಕಣ್ಣಿನ ಎತ್ತರಕ್ಕೆ ಸರಿ ಹೊಂದುವಂತೆ ಪ್ರದರ್ಶಿಸಿ.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು

**ಶಿಶುಗೀತೆ 1**

## ವಂದೇ ಮಾತರಂ



# ವಂದೇ ಮಾತರಂ

ವಂದೇ ಮಾತರಂ – ವಂದೇ ಮಾತರಂ
ಕೋಟಿ ಕೋಟಿ ಜನರೆಲ್ಲ ಭಾರತ ಮಾತೆ ಮಕ್ಕಳು,
ವಂದೇ ಮಾತರಂ, ವಂದೇ ಮಾತರಂ.
ಭಾಷೆ, ಮತಗಳು ಹಲವಿದೆ, ಒಟ್ಟಾಗಿದ್ದರೆ ಬಲವಿದೆ.
॥ವಂದೇ ಮಾತರಂ॥



## ಶಿಶುಗೀತೆ 2

## ನವಿಲು ಕುಣಿವ ದೇಶ





# ನವಿಲು ಕುಣಿವ ದೇಶ





ನವಿಲು ಕುಣಿವ ದೇಶ,
ಹುಲಿಯು ಗರ್ಜಿಸುವ ದೇಶ
ಕಮಲ ಅರಳಿ ನಗುವ ದೇಶ,
ಸಿಹಿ ಮಾವು ಬೆಳೆವ ನಮ್ಮ ಹೆಮ್ಮೆ
ದೇಶ ಇದುವೆ ನಮ್ಮ ದೇಶ,
ಇದು ನಮ್ಮೆಲ್ಲರ ದೇಶ, ನಾವು
ಭಾರತೀಯರು, ಮಂದಿರ, ಮಸೀದಿ,
ಚರ್ಚ್‌ಗಳಿರುವ ದೇಶ, ಇದುವೇ
ನಮ್ಮ ದೇಶ ಇದು ನಮ್ಮೆಲ್ಲ ದೇಶ.
ನಾವು ಭಾರತೀಯರು.







ಶಿಶುಗೀತೆ 3

## ಕನ್ನಡದ ಮಕ್ಕಳೆಲ್ಲಾ

# ಕನ್ನಡದ ಮಕ್ಕಳೆಲ್ಲಾ

ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ
ತಾಯ್ನಾಡ ಜಯಬೇರಿ ನಾವಾದವೆನ್ನಿ
ಗೆಳೆತನದ ವರದ ಹಸ್ತ ನೀಡಿ ಬನ್ನಿ
ಮೊಳೆತಿರುವ ಭೇದಗಳ ಬಿಟ್ಟು ಬನ್ನಿ.
(ಚಿತ್ರಗೀತೆ– ಚಿತ್ರ: ಕಣ್ತೆರೆದು ನೋಡು)



ಶಿಶುಗೀತೆ 4

# Merry Christmas and Happy New Year



## Merry Christmas & Happy New Year

We wish you a merry Christmas
We wish you a merry Christmas
We wish you a merry Christmas
and a happy new year

We wish you health and joy
We wish you love and fun
We wish this new year
brings peace for everyone

We wish you a merry Christmas
and a happy new year

# ಸ್ವಾತಂತ್ರ್ಯ ಯಾತ್ರೆ



## ಕಲಿಕಾ ಫಲಿತಗಳು

ಮಕ್ಕಳು ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ ಸರಳವಾದ "ಏನು, ಯಾಕೆ, ಹೇಗೆ ಮತ್ತು ಯಾವಾಗ'ಎಂಬ ಪ್ರಶ್ನೆಗಳನ್ನು ಹಾಗೂ ನೆನಪಿಸಿಕೊಳ್ಳುವ ಮತ್ತು ಊಹಿಸಿ ಉತ್ತರಿಸುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಉತ್ತರಿಸುತ್ತಾರೆ.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಪರಿಚಯಿಸಿಕೊಳ್ಳುವುದು ಹಾಗೂ ಕಥೆಯನ್ನು ಒಮ್ಮೆ ತರಗತಿಗೂ ಮುನ್ನ ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.




## ಕಥೆಯ ಸಂಕ್ಷಿಪ್ತ ರೂಪ

**ಸ್ವಾತಂತ್ರ್ಯ ಯಾತ್ರೆ**

ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ಧನಿ ಎಂಬ ಹುಡುಗ ಇದ್ದ. ಅವನಿಗೆ ಒಂಭತ್ತು ವರ್ಷ, ಅವನು ಆಶ್ರಮದಲ್ಲಿದ್ದ ಮೇಕೆ ಬಿನ್ನಿಯನ್ನು ನೋಡಿಕೊಳ್ಳುತ್ತಿದ್ದ. ಬಿನ್ನಿ ಧನಿ ಇಬ್ಬರೂ ಒಳ್ಳೆಯ ಗೆಳೆಯರು. ಗಾಂಧೀಜಿ ದಿನವೂ ಆ ಮೇಕೆಯ ಹಾಲನ್ನು ಕುಡಿಯುತ್ತಿದ್ದರು. ಗಾಂಧೀಜಿಯವರನ್ನು ಧನಿ 'ಬಾಪೂ' ಎಂದು ಕರೆಯುತ್ತಿದ್ದ. ಒಮ್ಮೆ ಬಾಪು ತಮ್ಮ ಅನುಯಾಯಿಗಳೊಂದಿಗೆ ಬ್ರಿಟೀಷರ ವಿರುದ್ಧ ಚಳುವಳಿಗಾಗಿ ದಂಡಿ ಎಂಬ ಊರಿಗೆ ಹೊರಟರು. ಆಗ ಧನಿ ತಾನೂ ಅವರೊಂದಿಗೆ ಹೋಗಲು ಬಯಸಿದನು. ಅವನ ತಂದೆ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಆಗ ಅವನು ಬಾಪೂ ಅವರನ್ನೇ ನೇರವಾಗಿ ಕೇಳಬೇಕೆಂದುಕೊಂಡನು. ಧನಿ ಬಾಪೂರ ಬಳಿ ಬಂದು ಹೆದರುತ್ತಾ ನಾನು ನಿಮ್ಮ ಜೊತೆ ದಂಡಿಗೆ ಬರಬಹುದೇ ಎಂದು ಕೇಳಿದ. ಆಗ ಬಾಪೂಜಿ ನಸುನಕ್ಕರು. ನೀನು ಇನ್ನೂ ಚಿಕ್ಕವನು, ನೀನು ನನ್ನೊಂದಿಗೆ ಬಂದರೆ ಬಿನ್ನಿಯನ್ನು ಯಾರು ನೊಡಿಕೊಳ್ಳುತ್ತಾರೆ? ಆಗ ಅವನು ಓಹೋ ಹೌದಲ್ಲವೇ ಬಿನ್ನಿ ನಾನು ತಿನ್ನಿಸಿದರೆ ಮಾತ್ರ ತಿನ್ನುತ್ತದೆ ಎಂದು ಬಿನ್ನಿಯ ಬೆನ್ನು ಸವರಿದನು. ಆಗ ಬಾಪು ಧನಿಗೆ, ಮಗು ನೀನು ಆಶ್ರಮದಲ್ಲಿದ್ದು ಬಿನ್ನಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿಯಾ? ನಾನು ಯಾತ್ರೆಯಿಂದ ಬಹಳ ಬಳಲಿ ಬರುತ್ತೇನೆ ನನಗೆ ಕುಡಿಯಲು ಸಾಕಷ್ಟು ಹಾಲು ಬೇಕಲ್ಲವೇ? ಎಂದು ಕೇಳಿದರು. ಆಗ ಧನಿ, ಆಗಲಿ 'ಬಾಪೂಜಿ' ನಾನು ಹಾಗೇ ಮಾಡುತ್ತೇನೆ. ಬಿನ್ನಿ ಮತ್ತು ನಾನು ನಿಮಗಾಗಿ ಆಶ್ರಮದಲ್ಲಿ ಕಾಯುತ್ತೇವೆ ಎಂದು ಹೇಳಿದನು.

## ಸ್ವಾತಂತ್ರ್ಯ ಯಾತ್ರೆ



### ಸೂಚನೆಗಳು

ಹಂತ 1: **ಕಥೆಯನ್ನು ಪರಿಚಯಿಸಿ.** ವಿಷಯದ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು, ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು ಮತ್ತು ಕೆಲವು ಚರ್ಚೆಯೊಂದಿಗೆ ಪುಸ್ತಕದ ಮುಖ ಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು.

ಹಂತ 2: ಮುಖದ ಹಾವಭಾವ ಮತ್ತು ಧ್ವನಿಯ ಏರಿಳಿತಗಳನ್ನು ಬಳಸಿ ನಿಮ್ಮದೇ ವಾಕ್ಯಗಳಲ್ಲಿ ಕಥೆಯನ್ನು ಹೇಳುವುದು.

ಹಂತ 3: ಕಥೆಯಲ್ಲಿರುವ ಪ್ರಮುಖ ಪಾತ್ರಗಳು ಮತ್ತು ಸನ್ನಿವೇಶಗಳ ಕಡೆ ಗಮನ ಸೆಳೆಯುವುದು. ಕಥೆಯನ್ನು ಓದುತ್ತಾ ಮುಖ್ಯ ಪದಗಳನ್ನು ವಿವರಿಸುತ್ತಾ, ಅದಕ್ಕೆ ಸಂಬಂದಿಸಿದ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು. ಉದಾ:

- ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ಧನಿ ಎಂಬ ಹುಡುಗ ಇದ್ದ – ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿ ಯಾರಿದ್ದರು?
- ಅವನು ಆಶ್ರಮದಲ್ಲಿದ್ದ ಮೇಕೆ ಬಿನ್ನಿಯನ್ನು ನೋಡಿಕೊಳ್ಳುತ್ತಿದ್ದ.– ಅವನು ಯಾರನ್ನು ನೋಡಿಕೊಳ್ಳುತ್ತಿದ್ದನು?
- ಗಾಂಧೀಜಿಯವರನ್ನು ಧನಿ 'ಬಾಪೂ' ಎಂದು ಕರೆಯುತ್ತಿದ್ದ – ಗಾಂಧೀಜಿಯವರನ್ನು ಧನಿ ಏನೆಂದು ಕರೆಯುತ್ತಿದ್ದನು?

ಹಂತ 4: ಕಥೆಯ ಕೊನೆಯಲ್ಲಿ ಮಕ್ಕಳಿಗೆ ಸರಳವಾದ ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಪ್ರಶ್ನೆಗಳನ್ನು ಕೇಳಿ. ನೆನಪಿಸಿಕೊಳ್ಳುವ ಪ್ರಶ್ನೆಗಳು ಉದಾಹರಣೆ: ಗಾಂಧೀಜಿಯ ಆಶ್ರಮ ಯಾವುದು?

- ಗಾಂಧೀಜಿಯವರ ಆಶ್ರಮ ಯಾವುದು?
- ಮೇಕೆಯ ಹೆಸರೇನು?
- ಧನಿ ಎಲ್ಲಿಗೆ ಹೋಗಲು ಬಯಸಿದನು?
- ಬಾಪು ಮತ್ತು ಅವರ ಅನುಯಾಯಿಗಳು ಎಲ್ಲಿಗೆ ಹೋಗಲು ಯೋಜಿಸಿದ್ದರು?
- ಏಕೆ ಬಾಪು ಧನಿಗೆ ನಮ್ಮ ಜೊತೆ ಬರಬಾರದೆಂದು ಹೇಳಿದರು?

ಹಂತ 5: ಕಥೆಯ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳಿ ಮತ್ತು ಕಥೆಯ ಪ್ರಮುಖ ವಿಚಾರಗಳ ಕುರಿತು ಚರ್ಚಿಸಿ. ತಾರ್ಕಿಕ ಪ್ರಶ್ನೆಗಳನ್ನು ಕೇಳುವುದು. ತಾರ್ಕಿಕ ಪ್ರಶ್ನೆಗಳು ಉದಾಹರಣೆ:

- ನೀವು ಮೇಕೆಯನ್ನು ಹೊಂದಿದ್ದರೆ, ನೀವು ಏನೇನು ಮಾಡುತ್ತಿದ್ದಿರಿ?
- ಧನಿ ಬಿನ್ನಿಯನ್ನು ನೋಡಿಕೊಳ್ಳದಿದ್ದರೆ ಏನಾಗುತ್ತಿತ್ತು?
- ಧನಿ ಮೆರವಣಿಗೆಗೆ ಹೋಗಿದ್ದರೆ ಏನಾಗುತ್ತಿತ್ತು?
- ಧನಿಯ ಜಾಗದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದಿರಿ?

ಹಂತ 6: ಕಥೆಯ ಪಾತ್ರಗಳೊಂದಿಗೆ ಮಕ್ಕಳು ಇತರರ ಭಾವನೆ ಮತ್ತು ಅನುಭವಗಳನ್ನು ಹೊಂದಲು ಅಗತ್ಯವಿರುವ ಸರಳ ಪ್ರಶ್ನೆಗಳನ್ನು ಕೇಳಿ.

- ಬಾಪೂರವರು ಧನಿಗೆ ಚಳುವಳಿಗೆ ಬರಲು ಒಪ್ಪಿಗೆ ಸೂಚಿಸಿದ್ದರೆ ಧನಿಗೆ ಏನಾಗುತ್ತಿತ್ತು?

ಹಂತ 7: ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2–4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.

## ಚಟುವಟಿಕೆ 1

## ಅಂಗೈ ಮುದ್ರಣದ ಧ್ವಜ

### ಬೋಧನಾ ಕಲಿಕಾ ಸಾಮಗ್ರಿಗಳು

ಕೇಸರಿ, ಹಸಿರು ಮತ್ತು ನೀಲಿ ಬಣ್ಣಗಳು(ವಾಟರ್ ಕಲರ್), ಬಿಳಿ ಹಾಳೆಗಳು



### ಸೂಚನೆಗಳು

1. ಧ್ವಜದ ಬಣ್ಣಗಳನ್ನು ಒಂದು ತಟ್ಟೆಯಲ್ಲಿ ಪ್ರತ್ಯೇಕವಾಗಿ ಇಡುವುದು. ಚಿತ್ರದಲ್ಲಿ ಕಾಣುವಂತೆ ಮಗುವಿನ ಕೈಗೆ ಧ್ವಜದ ಬಣ್ಣವನ್ನು ಕೈಗೆ ಹಚ್ಚುವುದು. ಬಣ್ಣದ ಅಂಗೈಯನ್ನು ಮಗು ಬಿಳಿ ಹಾಳೆಯ ಮೇಲೆ ಒತ್ತುವುದು.
2. ಮಧ್ಯದ ಬಿಳಿ ಭಾಗದಲ್ಲಿ ಅಶೋಕ ಚಕ್ರವನ್ನು ನೀಲಿ ಬಣ್ಣದಿಂದ ಶಿಕ್ಷಕಿ ಚಿತ್ರಿಸುವುದು. ಚಟುವಟಿಕೆಯ ನಂತರ ಸೋಪಿನಿಂದ ಕೈಗಳನ್ನು ಸ್ವಚ್ಛವಾಗಿ ತೊಳೆಯುವುದು.


## ಚಟುವಟಿಕೆ 2

## ಭಾರತೀಯ ಬಣ್ಣದ ಮಣಿಕಟ್ಟಿನ ಬ್ಯಾಂಡ್



### ಬೋಧನಾ ಕಲಿಕಾ ಸಾಮಗ್ರಿಗಳು

12 ಇಂಚುಗಳಷ್ಟು ಇರುವ 1 ಕೇಸರಿ, 1 ಹಸಿರು ಮತ್ತು 2 ಬಿಳಿ ದಪ್ಪ ದಾರ/ವುಲ್ಲನ್ ದಾರಗಳು




### ಸೂಚನೆಗಳು

1. ಶಿಕ್ಷಕಿ 8 ಉಣ್ಣೆಯ ದಾರಗಳನ್ನು ಸಮಾನ ಉದ್ದದಲ್ಲಿ ತೆಗೆದುಕೊಂಡು 4 ಭಾಗಗಳಾಗಿ ಮಾಡಬೇಕು. ಪ್ರತಿಯೊಂದು ಬಣ್ಣದ ದಾರವು 2 ಇರಬೇಕು ಮತ್ತು ಬಿಳಿ, ಹಸಿರು, ಬಿಳಿ ಮತ್ತು ಕಿತ್ತಳೆ ಬಣ್ಣಗಳಂತೆ ಜೋಡಿಸುವುದು.
2. ಎಲ್ಲವನ್ನೂ ಒಟ್ಟುಗೂಡಿಸಿ ಗಂಟು ಹಾಕುವುದು.
3. ಕಿತ್ತಳೆ ಬಣ್ಣವನ್ನು ಹೊಂದಿರುವ ದಾರವನ್ನು ತೆಗೆದುಕೊಂಡು ಚಿತ್ರ 2ರಲ್ಲಿ ತೋರಿಸಿರುವಂತೆ ಬಿಳಿ ಉಣ್ಣೆಯ ದಾರದ ಸುತ್ತಲೂ ಗಂಟು ಹಾಕುವುದು.
4. ಬಿಳಿ ಬಣ್ಣದ ಉಣ್ಣೆಯ ದಾರವನ್ನು ತೆಗೆದುಕೊಂಡು ಚಿತ್ರ 3ರಲ್ಲಿ ತೋರಿಸಿರುವಂತೆ ಗಂಟು ಹಾಕುವುದು.
5. ಹಸಿರು ಉಣ್ಣೆಯ ದಾರವನ್ನು ತೆಗೆದುಕೊಂಡು ಬಿಳಿಯ ದಾರಕ್ಕೆ ಗಂಟುಹಾಕಿ ಈಗ ಚಿತ್ರ 4ರಲ್ಲಿ ತೋರಿಸಿರುವಂತೆ 3 ಬಣ್ಣದ ಬ್ಯಾಂಡ್ ಅನ್ನು ಪೂರ್ಣಗೊಳಿಸಿರುತ್ತೇವೆ.
6. ಇದೇ ರೀತಿ ಗಂಟುಗಳನ್ನು ದಾರದ ಕೊನೆಯವರೆಗೂ ಮುಂದುವರೆಸಿಕೊಂಡು ಹೋಗಿ ಮತ್ತು ತುದಿಗಳನ್ನು ಗಂಟಿನಿಂದ ಕಟ್ಟಿಕೊಳ್ಳುವುದು.
7. ಮಗು ಇದನ್ನು ತನ್ನ ಮಣಿಕಟ್ಟಿನ ಸುತ್ತಲೂ ಬ್ಯಾಂಡ್ ಆಗಿ ಕಟ್ಟಿಕೊಳ್ಳಬಹುದು. ಪರ್ಯಾಯವಾಗಿ ಮಕ್ಕಳು ಅದನ್ನು ಸ್ನೇಹದ ಬ್ಯಾಂಡ್ ಆಗಿ ಪರಸ್ಪರ ಕಟ್ಟಿಕೊಳ್ಳಬಹುದು.

ಚಟುವಟಿಕೆ 1

## ರಾಷ್ಟ್ರೀಯ ಚಿಹ್ನೆಗಳು

### ಕಲಿಕಾ ಫಲಿತಗಳು

- ಗುಂಪು ಚಟುವಟಿಕೆ ಮತ್ತು ತಂಡದ ಕೆಲಸವನ್ನು ಪ್ರೋತ್ಸಾಹಿಸುವುದು
- ರಾಷ್ಟ್ರೀಯ ಚಿಹ್ನೆಗಳನ್ನು ಗುರುತಿಸುವುದು – ರಾಷ್ಟ್ರ ಪಕ್ಷಿ, ಪ್ರಾಣಿ, ಧ್ವಜ,
- ಹಬ್ಬಗಳ ಬಗ್ಗೆ ಅರ್ಥಮಾಡಿಕೊಳ್ಳುವುದು

### ಕಲಿಕಾ ಸಾಮಗ್ರಿಗಳು

ಹಳೆಯ ನಿಯತಕಾಲಿಕೆಗಳಿಂದ ಕತ್ತರಿಸಿದ ರಾಷ್ಟ್ರೀಯ ಪಕ್ಷಿ, ಪ್ರಾಣಿ ಮತ್ತು ಚಿಹ್ನೆಗಳ ಚಿತ್ರಗಳು, ಅಂಟು, ಚಾರ್ಟ್ ಪೇಪರ್

### ಸೂಚನೆಗಳು

1. ಹಳೆಯ ನಿಯತಕಾಲಿಕೆಗಳ ಮೂಲಕ ರಾಷ್ಟ್ರೀಯ ಪಕ್ಷಿ, ಪ್ರಾಣಿ ಚಿತ್ರಗಳನ್ನು ಹುಡುಕಲು ಮಕ್ಕಳನ್ನು ಪ್ರೋತ್ಸಾಹಿಸಿ. ದೊಡ್ಡ ಮಕ್ಕಳು/ಶಿಕ್ಷಕರು ಚಿತ್ರಗಳನ್ನು ಕತ್ತರಿಸಬಹುದು.
2. ಕತ್ತರಿಸಿದ ಚಿತ್ರಗಳನ್ನು ಚಾರ್ಟ್‌ಪೇಪರ್‌ಲ್ಲಿ ಅಂಟಿಸಲು ಚಿಕ್ಕ ಮಕ್ಕಳಿಗೆ ಸಹಾಯ ಮಾಡಿ. ಶಿಕ್ಷಕರು ಚಿತ್ರಗಳಿಗೆ ಅಂದವಾಗಿ ಹೆಸರುಗಳನ್ನು ಬರೆಯುವುದು. ನಂತರ ಈ ಚಾರ್ಟ್‌ನ್ನು ತರಗತಿಯಲ್ಲಿ ಪ್ರದರ್ಶಿಸುವುದು.

ಚಟುವಟಿಕೆ 2

## ದ್ವಿದಳ ಧಾನ್ಯಗಳು/ಕಾಳುಗಳಿಂದ ಮಾಡಿದ ಭಾರತೀಯ ಧ್ವಜ



### ಕಲಿಕಾ ಸಾಮಗ್ರಿಗಳು

ಬೇಳೆ ಕಾಳುಗಳು, ಉದ್ದಿನ ಬೇಳೆ, ಹೆಸರು ಕಾಳು, ಮಸೂರ್ ಬೇಳೆ, ಅಂಟು, ಚಾರ್ಟ್ ಪೇಪರ್.

### ಸೂಚನೆಗಳು

1. ಚಾರ್ಟ್ ಕಾಗದದ ಮೇಲೆ ದೊಡ್ಡ ಧ್ವಜದ ರೂಪು ರೇಖೆಯನ್ನು ಎಳೆಯಿರಿ
2. ಧ್ವಜವನ್ನು ತಯಾರಿಸಲು ಸರಿಯಾದ ಬಣ್ಣದ ದ್ವಿದಳ ಧಾನ್ಯಗಳನ್ನು ಅಂಟಿಸಲು ಮಕ್ಕಳಿಗೆ ಸಹಾಯ ಮಾಡಿ.

## ಚಟುವಟಿಕೆ 3


# 3 ಬಣ್ಣಗಳ ರಂಗೋಲಿ

### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣ, ರಂಗೋಲಿ ಪುಡಿ – ಬಿಳಿ, ಹಸಿರು, ನೀಲಿ ಮತ್ತು ಕೇಸರಿ ಬಣ್ಣಗಳು

### ಸೂಚನೆಗಳು

1. ಚಿತ್ರ 1ರಲ್ಲಿ ತೋರಿಸಿರುವಂತೆ ಚುಕ್ಕಿಗಳನ್ನು ಇಡಿ. ಚಿತ್ರ 2–3 ರಲ್ಲಿ ತೋರಿಸಿರುವಂತೆ ಚುಕ್ಕಿಗಳನ್ನು ಸೇರಿಸುತ್ತಾ ಹೋಗಿ.
2. ರಂಗೋಲಿ ಬಿಡಿಸಿದ ನಂತರ ಸರಿಯಾದ ಬಣ್ಣವನ್ನು ತುಂಬಲು ಮಕ್ಕಳಿಗೆ ಹೇಳುವುದು.



ಚಟುವಟಿಕೆ 1

## ಹೊಡೆಯುವ/ಬಾರಿಸುವ/ಬೀಟ್ ಶಬ್ಧಕ್ಕೆ /ಪಥ ಸಂಚಲನ



ಸರಳ ಶಬ್ಧಕ್ಕೆ ಲಯಬದ್ಧವಾಗಿ ಸಾಲಿನಲ್ಲಿ ಪಥ ಸಂಚಲನ ಮಾಡಲು ಮಕ್ಕಳಿಗೆ ಹೇಳಿಕೊಡುವುದು.

### ಕಲಿಕಾ ಸಾಮಗ್ರಿಗಳು

ಬಾರಿಸುವ ಡ್ರಮ್

### ಸೂಚನೆಗಳು

1. ಶಿಕ್ಷಕಿ ಎಲ್ಲಾ ಮಕ್ಕಳನ್ನು ನಾಲ್ಕು ಸಾಲುಗಳನ್ನಾಗಿ ಮಾಡಿ ನಿಲ್ಲಿಸಿ. ಲಯಬದ್ಧವಾಗಿ ಪಥಸಂಚಲನ ಮಾಡುವುದು.
2. ಸ್ಪಷ್ಟ ಮತ್ತು ನಿರ್ದಿಷ್ಟ ಸೂಚನೆಗಳನ್ನು ನೀಡುವುದು.
3. ಪ್ರಕ್ರಿಯೆಗೊಳಿಸಲು ಮಕ್ಕಳಿಗೆ ಸಮಯ ನೀಡುವುದು.
4. ಹೇಗೆ ಪಥ ಸಂಚಲನ ಮಾಡಬೇಕು ಎಂದು ಒಮ್ಮೆ ಮಕ್ಕಳಿಗೆ ತೋರಿಸಿ, ಅದರಂತೆ ಮಕ್ಕಳು ಮಾಡಲು ಸಹಕರಿಸುವುದು.
5. ಪಥ ಸಂಚಲನದಲ್ಲಿ ಹೇಗೆ ಧ್ವಜಕ್ಕೆ ವಂದಿಸುವುದು ಎಂಬುದನ್ನು ತೋರಿಸಿ ಅರ್ಥೈಸುವುದು.
6. ಇದನ್ನು ಪ್ರತೀ ದಿನ ಶಾಲೆಯಲ್ಲಿ ಮಕ್ಕಳಿಂದ ಮಾಡಿಸುವುದು.

ಚಟುವಟಿಕೆ 2

## ನೆರೆಹೊರೆಯ ಸುತ್ತಲೂ ನಡೆಯುವುದು

### ಕಲಿಕಾ ಸಾಮಗ್ರಿಗಳು

ನಮ್ಮ ರಾಷ್ಟ್ರಧ್ವಜ

### ಸೂಚನೆಗಳು

1. ಮಕ್ಕಳಿಗೆ ಆಸಕ್ತಿದಾಯಕವಾಗಿಸಲು ಶಿಕ್ಷಕಿ ಎಲ್ಲಾ ಮಕ್ಕಳನ್ನು ನಾಲ್ಕು ಸಾಲುಗಳನ್ನಾಗಿ ಮಾಡಿ ನಿಲ್ಲಿಸಿ.
2. ಅವರ ಕೈಗೆ ಪ್ಲಾಸ್ಟಿಕ್/ಕಾಗದದ ಬಾವುಟಗಳನ್ನು ಕೊಟ್ಟು ಲಯಬದ್ಧವಾಗಿ ನೆರೆಹೊರೆಯ ಸುತ್ತಲೂ ಸ್ವಲ್ಪ ದೂರ ನಡೆಸುವುದು.
3. ಮಕ್ಕಳನ್ನು ಜೊತೆ ಜೊತೆಯಾಗಿ ಸಾಲಿನಲ್ಲಿ ಕರೆದೊಯ್ಯುವುದು.
4. ರಸ್ತೆಯಲ್ಲಿ ಮಕ್ಕಳು ನಡೆಯುವಾಗ ಯಾವುದೇ ಅನಾಹುತಗಳಿಗೆ ಆಸ್ಪದವಿಲ್ಲದಂತೆ ಮುನ್ನೆಚರಿಕೆ ಕ್ರಮಗಳನ್ನು ಕೈಗೊಳ್ಳುವುದು.
5. ರಸ್ತೆಯಲ್ಲಿ ನಡೆಯುವಾಗ ನಮ್ಮ ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದು ಸಾಗುವುದು.
6. ಮಕ್ಕಳು ಸಮತೋಲನದಲ್ಲಿ ಹೆಜ್ಜೆ ಹಾಕುವುದು.

# ರಾಷ್ಟ್ರೀಯ/ರಾಜ್ಯದ ಚಿಹ್ನೆಗಳು ಮತ್ತು ಹಬ್ಬಗಳು

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು

1. Stand at ease
2. Attention
3. March in your place

1. Stand at ease
2. Attention
3. March in your place

1. Stand at ease
2. Attention
3. March in your place

1. March forward
2. Turn around
3. Turn all around

1. March forward
2. Turn around
3. Turn all around

1. March forward
2. Turn around
3. Turn all around

Say
gesture
model

1. Stand at ease
2. Attention
3. March in your place
4. March forward
5. Turn around
6. Turn all around

1. Attention
2. March forward
3. Turn around
4. Turn all around
5. March in your place
6. Stand at ease

ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಪಂಚ

# ಆಕೃತಿಗಳನ್ನು ತಿಳಿಯುವುದು

# ಕಲಿಕಾ ಫಲಿತಗಳು

## ಆಕೃತಿಗಳನ್ನು ತಿಳಿಯುವುದು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಪ್ರತಿಯೊಂದು ಆಕೃತಿಯ ವಿಶಿಷ್ಟ ಗುಣಲಕ್ಷಣಗಳನ್ನು ಗುರುತಿಸುವುದು ಮತ್ತು ಚೌಕಗಳು, ತ್ರಿಭುಜಗಳು, ವೃತ್ತಗಳನ್ನು ಹೆಸರಿಸುವುದು ಮತ್ತು ಉದ್ದ ಹಾಗೂ ಅಗಲದ ಪರಿಕಲ್ಪನೆಯನ್ನು ಅರಿಯುವುದು. | 1 ಚೌಕಗಳು, ತ್ರಿಭುಜಗಳು, ವೃತ್ತಗಳು, ಆಯತಗಳು, ಇಂತಹ ಆಕೃತಿಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು. | 1 ವಸ್ತುಗಳನ್ನು ಸಂಕೀರ್ಣವಾದ ಮೂರು ಆಯಾಮದ ಆಕೃತಿಗಳನ್ನು ಆಧರಿಸಿ ಪ್ರತ್ಯೇಕಿಸುವುದು – ಉದಾಹರಣೆಗೆ ಸಿಲಿಂಡರ್‌ಗಳು, ಗೋಳ, ಶಂಕು ಇತ್ಯಾದಿ. |
| 2 ಆಕೃತಿಯ ಆಧಾರದ ಮೇಲೆ ವಸ್ತುಗಳನ್ನು ವರ್ಗೀಕರಿಸುವುದು ಮತ್ತು ವಿಂಗಡಿಸುವುದು. | 2 ಸರಳವಾದ ಆಕೃತಿಗಳನ್ನು ಆಧರಿಸಿ ವಸ್ತುಗಳನ್ನು ಚೌಕಗಳು, ತ್ರಿಭುಜಗಳು, ವೃತ್ತಗಳು ಎಂದು ವರ್ಗೀಕರಿಸುವುದು. | 2 ವಿವಿಧ ಆಕೃತಿಗಳನ್ನು ನೆನಪು ಮಾಡಿಕೊಂಡು ಚಿತ್ರ ಬರೆದು, ಹೆಸರಿಸುವುದು ಅಥವಾ ಕಡ್ಡಿಗಳು ಇತ್ಯಾದಿಗಳನ್ನು ಬಳಸಿಕೊಂಡು ಇವುಗಳನ್ನು ರಚಿಸುವುದು. |
| 3 ಆಕೃತಿಗಳ ಸರಳ ವಿನ್ಯಾಸಗಳನ್ನು ನಕಲು ಮಾಡುವುದು. | 3 ವಿವಿಧ ಆಕೃತಿಗಳನ್ನು ಅಥವಾ ಟ್ಯಾನ್‌ಗ್ರಾಮ್‌ಗಳನ್ನು ಬಳಸಿಕೊಂಡು ವಿನ್ಯಾಸಗಳನ್ನು ನಕಲು ಮಾಡುವುದು. | 3 ಗುಂಪಿಗೆ ಸೇರದೇ ಇರುವ ವಸ್ತುವನ್ನು ಗುರುತಿಸುವುದು/ವಿನ್ಯಾಸದ ಕ್ರಮಕ್ಕೆ ಸೇರದ ಅಕ್ಷರವನ್ನು ಗುರುತಿಸುವುದು. |
| | 4 ಮಕ್ಕಳಿಗೆ ಅವರ ಬಟ್ಟೆ, ಶೂ ಸೋಲ್, ಹಾಗೂ ದೈನಂದಿನ ಬದುಕಿನಲ್ಲಿ ಕಾಣಿಸುವ ಇನ್ನಿತರ ವಿನ್ಯಾಸಗಳನ್ನು ತೋರಿಸುವುದು. | 4 ಸರಳವಾದ ಜ್ಯಾಮಿತಿಯ ವಿನ್ಯಾಸಗಳನ್ನು ವಿವಿಧ ಆಕೃತಿಗಳನ್ನು ಅಥವಾ ಟ್ಯಾನ್‌ಗ್ರಾಮ್‌ಗಳನ್ನು ಬಳಸಿಕೊಂಡು ನಕಲು ಮಾಡುವುದು/ರಚಿಸುವುದು. |
| | | 5 ವಿವಿಧ ಅಗತ್ಯಗಳಿಗೆ ಸೂಕ್ತವಾದ ಆಕೃತಿಗಳನ್ನು ಗುರುತಿಸುವುದು. – ಉದಾ: ತಿನ್ನುವುದು, ಕುಡಿಯುವುದು, ಐಸ್‌ಕ್ರೀಮ್ ನೆಕ್ಕುವುದು, ಕ್ರಿಕೆಟ್ ಆಡುವುದು ಇತ್ಯಾದಿ. |

## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಚೌಕಗಳು, ತ್ರಿಭುಜಗಳು, ವೃತ್ತಗಳು, ಆಯತಗಳು, ಇಂತಹ ಆಕೃತಿಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು.
- ಸರಳವಾದ ಆಕೃತಿಗಳನ್ನು ಆಧರಿಸಿ ವಸ್ತುಗಳನ್ನು ಚೌಕಗಳು, ತ್ರಿಭುಜಗಳು, ವೃತ್ತಗಳು ಎಂದು ವರ್ಗೀಕರಿಸುವುದು.
- ವಿವಿಧ ಆಕೃತಿಗಳನ್ನು ಅಥವಾ ಟ್ಯಾನ್‌ಗ್ರಾಮ್‌ಗಳನ್ನು ಬಳಸಿಕೊಂಡು ವಿನ್ಯಾಸಗಳನ್ನು ನಕಲು ಮಾಡುವುದು.
- ಮಕ್ಕಳಿಗೆ ಅವರ ಬಟ್ಟೆ, ಶೂ ಸೋಲ್, ಹಾಗೂ ದೈನಂದಿನ ಬದುಕಿನಲ್ಲಿ ಕಾಣಿಸುವ ಇನ್ನಿತರ ವಿನ್ಯಾಸಗಳನ್ನು ತೋರಿಸುವುದು.

## ವಿವಿಧ ಆಕೃತಿಗಳ ಪರಿಕಲ್ಪನೆ – ಚೌಕಗಳು, ತ್ರಿಭುಜಗಳು, ವೃತ್ತಗಳು, ಆಯತಗಳು

### ಕಲಿಕಾ ಫಲಿತಗಳು

ಆಕೃತಿಗಳ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು.

**ಚಟುವಟಿಕೆ 1**

### ನರಿ ಮತ್ತು ಕೊಕ್ಕರೆಯ ಕಥೆ

### ಕಲಿಕಾ ಸಾಮಗ್ರಿಗಳು

ಮಿಂಚುಪಟ್ಟಿಗಳು **C3.1** (3 ಮಿಂಚುಪಟ್ಟಿಗಳು – 1. ನರಿ ಮತ್ತು ಕೊಕ್ಕರೆ ಒಟ್ಟಿಗೇ ನಿಂತಿರುವುದು, 2. ಕೊಕ್ಕರೆ ತಟ್ಟೆಯೊಂದಿಗೆ ಇರುವುದು 3. ನರಿಯು ಬಾಟಲಿಯೊಂದಿಗೆ ಇರುವುದು)

### ಕಥೆಯ ಸಂಕ್ಷಿಪ್ತ ರೂಪ

**ನರಿ ಮತ್ತು ಕೊಕ್ಕರೆ**

ಒಂದಾನೊಂದು ಕಾಡಿನಲ್ಲಿ ಒಂದು ನರಿ ಇತ್ತು. ಕೊಕ್ಕರೆಯು ನರಿಯ ಆಪ್ತ ಗೆಳೆಯನಾಗಿತ್ತು. ಇಬ್ಬರೂ ಆಗೀಗ ಪರಸ್ಪರರ ಮನೆಗೆ ಬಂದು ಹೋಗುತ್ತಿದ್ದರು.







ಒಂದು ದಿನ ಕೊಕ್ಕರೆಯು ನರಿಯನ್ನು ಊಟಕ್ಕೆ ಕರೆಯಿತು. ಒಂದು ಎತ್ತರವಾದ ಹೂಜಿಯಲ್ಲಿ ಪಾಯಸವನ್ನು ಹಾಕಿ ಕೊಟ್ಟಿತು. ಆ ಹೂಜಿಯ ಕತ್ತು ತುಂಬ ಚಿಕ್ಕದಿತ್ತು. ಪಾಪದ ನರಿಗೆ ಅದರೊಳಗೆ ಬಾಯಿ ಹಾಕಿ ತಿನ್ನಲಿಕ್ಕೆ ಆಗಲೇ ಇಲ್ಲ. ಕೊಕ್ಕರೆ ಮಾತ್ರ ತನ್ನ ಉದ್ದನೆಯ ಕೊಕ್ಕನ್ನು ಹೂಜಿಯೊಳಗೆ ಹಾಕಿ, ಆನಂದದಿಂದ ಪಾಯಸವನ್ನು ಸವಿಯಿತು.

ಮರುದಿನ ನರಿಯು ಕೊಕ್ಕರೆಯನ್ನು ತನ್ನ ಮನೆಗೆ ಊಟಕ್ಕೆ ಕರೆಯಿತು. ನರಿಯು ಪಾಯಸವನ್ನು ಒಂದುತಟ್ಟೆಯಲ್ಲಿ ಬಡಿಸಿತು. ಕೊಕ್ಕರೆಗೆ ತನ್ನ ಉದ್ದ ಕೊಕ್ಕಿನಿಂದ ತಟ್ಟೆಯಲ್ಲಿ ಇದ್ದಿದ್ದನ್ನು ತಿನ್ನಲು ಆಗಲೇ ಇಲ್ಲ. ಆದರೆ ನರಿ ಮಾತ್ರ ತಟ್ಟೆಯಲ್ಲಿದ್ದ ಎಲ್ಲ ಪಾಯಸವನ್ನೂ ನೆಕ್ಕಿ, ತಟ್ಟೆಯನ್ನು ಸ್ವಚ್ಛ ಮಾಡಿತು!



ಚಟುವಟಿಕೆ 1

## ನರಿ ಮತ್ತು ಕೊಕ್ಕರೆಯ ಕಥೆ

### ಶಿಕ್ಷಕರ ಪೂರ್ವಸಿದ್ಧತೆ

ಕಥೆಯ ಕಾರ್ಡ್‌ನ್ನು ಸಿದ್ಧ ಮಾಡಿಟ್ಟುಕೊಳ್ಳುವುದು ಮತ್ತು ಕಥೆಯನ್ನು ತಿಳಿದುಕೊಂಡಿರುವುದು. ಎಲ್ಲ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.


### ಸೂಚನೆಗಳು

1. ಮಕ್ಕಳು ಚಿತ್ರಗಳನ್ನು ನೋಡಲು ಸಾಧ್ಯವಾಗುವಂತೆ ಚಿತ್ರ ಕಾರ್ಡುಗಳನ್ನು ತೋರಿಸುತ್ತ ನರಿ ಮತ್ತು ಕೊಕ್ಕರೆಯ ಕಥೆಯನ್ನು ಪರಿಚಯಿಸುವುದು. ನರಿಯು ಏಕೆ ಪಾಯಸವನ್ನು ತಿನ್ನಲು ಸಾಧ್ಯವಾಗಲಿಲ್ಲ ಎಂದು ಕೇಳುವುದು. ಹೂಜಿಯ ಆಕೃತಿಯ ಕಡೆಗೆ ಮಕ್ಕಳ ಗಮನ ಸೆಳೆದು, ಅವರಿಗೆ ವಿವರಿಸಲು ಅವಕಾಶ ಕೊಡುವುದು.
2. ನೀವು ಪುಟವನ್ನು ತಿರುಗಿಸುವ ಮೊದಲು, ನರಿಯು ಯಾವ ಬಗೆಯ ಪಾತ್ರೆಯಲ್ಲಿ ತಿನ್ನಬಹುದು ಅಂತ ಎಂದು ಊಹಿಸುತ್ತೀರಿ ಅಂತ ಮಕ್ಕಳಿಗೆ ಕೇಳುವುದು – ಅವರಿಗೆ ಊಹಿಸಲು ಅವಕಾಶ ಕೊಡುವುದು.
3. ಕೊನೆಯ ಪುಟವನ್ನು ತೋರಿಸುವುದು ಮತ್ತು ಕಥೆಯ ಇನ್ನುಳಿದ ಭಾಗವನ್ನು ವಿವರಿಸುವುದು.
4. ನಾವು ಯಾವ ಬಗೆಯ ತಿಂಡಿಯನ್ನು ತಿನ್ನುತ್ತೇವೆ ಎಂದು ಕೇಳುವುದು. ತಿನ್ನುವುದಕ್ಕೆ ಮತ್ತು ಕುಡಿಯುವುದಕ್ಕೆ ನಾವು ಒಂದೇ ರೀತಿಯ ಪಾತ್ರೆಯನ್ನು ಬಳಸುತ್ತೇವೆಯೇ? ತಟ್ಟೆ ಮತ್ತು ಲೋಟದ ನಡುವೆ ಇರುವ ವ್ಯತ್ಯಾಸ ಏನು? ಮಕ್ಕಳು ಅವರಿಗೆ ತಿಳಿದಿರುವ ಪದಗಳಲ್ಲಿ ವ್ಯತ್ಯಾಸವನ್ನು ವಿವರಿಸಲು ಅವಕಾಶ ಕೊಡುವುದು.

---


ಚಟುವಟಿಕೆ 2

## ಪ್ರಾಥಮಿಕ ಆಕೃತಿಗಳನ್ನು ಪರಿಚಯಿಸುವುದು: ಮಕ್ಕಳಿಗೆ ಆಕೃತಿಗಳನ್ನು ಗುರುತು ಹಿಡಿಯಲು ಸಹಾಯ ಮಾಡುವುದು




### ಸೂಚನೆಗಳು

**ಮಕ್ಕಳಿಗೆ ಆಕೃತಿಗಳ ಮೂಲಭೂತ ಲಕ್ಷಣಗಳನ್ನು ಗಮನಿಸಿ, ವಿವರಿಸಲು ಅವಕಾಶ ಕೊಡುವುದು.**




1. ಮಕ್ಕಳನ್ನು ಅರ್ಧ–ವೃತ್ತಾಕಾರವಾಗಿ ಕೂರಿಸುವುದು ಮತ್ತು ಒಂದೇ ಬಣ್ಣ ಹಾಗೂ ಗಾತ್ರದ ವಿವಿಧ ಆಕಾರಗಳ ಕಾರ್ಡುಗಳನ್ನು ಕೇಂದ್ರದಲ್ಲಿ ಇಡುವುದು. (ಕನಿಷ್ಠ 3 ಜೊತೆ)
2. ಒಂದು ಮಗುವನ್ನು ಕರೆಯುವುದು ಮತ್ತು ಕಾರ್ಡುಗಳನ್ನು ಗುಂಪು ಮಾಡಲು ಹೇಳುವುದು. ಮಗುವು ಆಕೃತಿಗಳ ಆಧಾರದ ಮೇಲೆ ಗುಂಪು ಮಾಡಬಹುದು. ಸರಿಯಾಗಿ ಮಾಡದಿದ್ದರೆ, ಯಾವ ಆಧಾರದ ಮೇಲೆ ಗುಂಪು ಮಾಡಬೇಕೆಂದು ಹೇಳುವುದು ಮತ್ತು ಇನ್ನೊಂದು ಮಗುವಿಗೆ ಗುಂಪು ಮಾಡಲು ಕರೆಯುವುದು.
3. ಈಗ ಗುಂಪು ಮಾಡಿರುವುದು ಸರಿಯೇ ಎಂದು? ಮತ್ತು ಯಾಕೆ ಇದನ್ನು ಈ ರೀತಿಯಾಗಿ ಗುಂಪು ಮಾಡಬೇಕು ಎಂದು ಬೇರೆ ಮಕ್ಕಳನ್ನು ಕೇಳುವುದು. ಮಕ್ಕಳಿಗೆ ಪ್ರತಿಕ್ರಿಯೆ ನೀಡಲು ಅವಕಾಶ ಕೊಡುವುದು. 'ಬೋಧನೆ' ಮಾಡಬೇಕು ಎನ್ನಿಸುವ ಪ್ರವೃತ್ತಿಯನ್ನು ಅಥವಾ ಮಕ್ಕಳಿಗೆ ನೀವೇ ಮುಂದಾಗಿ ವ್ಯತ್ಯಾಸ ಹೇಳುವುದನ್ನು ತಡೆಯುವುದು ಬಹಳ ಮುಖ್ಯ – ಅವರೇ ಗಮನಿಸಿ, ಅದರಿಂದ ತಮ್ಮ ನಿರ್ಣಯಗಳನ್ನು ಹೇಳಲಿ. ಹೆಚ್ಚಿನ ವೇಳೆ ಮಕ್ಕಳು ವ್ಯತ್ಯಾಸವನ್ನು ಸರಿಯಾಗಿ ವ್ಯಕ್ತಪಡಿಸಲು ಸಮರ್ಥರಿರುವುದಿಲ್ಲ – 'ಬೇರೆ ಬೇರೆ ಥರ ಕಾಣುತ್ತೆ' ಎನ್ನಬಹುದು ಅಥವಾ ಕೆಲವರು 'ಇದು ದುಂಡಗಿದೆ, ಅದು ದುಂಡಗಿಲ್ಲ' ಎನ್ನಬಹುದು – ಏನೇ ಇದ್ದರೂ ಅವರ ಉತ್ತರಗಳನ್ನು ಸ್ವೀಕರಿಸುವುದು)



ಚಟುವಟಿಕೆ 2

## ಪ್ರಾಥಮಿಕ ಆಕೃತಿಗಳನ್ನು ಪರಿಚಯಿಸುವುದು




4. ನಂತರ ಚೌಕ ಮತ್ತು ತ್ರಿಭುಜವನ್ನು ತೆಗೆದುಕೊಳ್ಳುವುದು – ಮಕ್ಕಳಿಗೆ ಅದರ ಅಂಚುಗಳನ್ನು ಗಮನಿಸಲು ಹೇಳುವುದು. ಎರಡೂ ಆಕೃತಿಗಳ ಅಂಚುಗಳಲ್ಲಿ ವ್ಯತ್ಯಾಸವಿದೆಯೇ? ಮಕ್ಕಳಿಗೆ ಗಮನಿಸಿ, ವ್ಯತ್ಯಾಸವನ್ನು ಹೇಳಲು ಅವಕಾಶ ಕೊಡುವುದು. ಈಗ ಮೂಲೆಗಳನ್ನು ಗಮನಿಸಲು ಹೇಳುವುದು – ಈ ಆಕೃತಿಗಳಲ್ಲಿ ಎಷ್ಟು ಮೂಲೆಗಳಿವೆ?
5. ಈ ಲಕ್ಷಣಗಳನ್ನು ಆಧರಿಸಿ, ವೃತ್ತವನ್ನು ಗಮನಿಸುವಂತೆ ಮಕ್ಕಳಿಗೆ ಹೇಳುವುದು. ಚೌಕ, ತ್ರಿಭುಜ ಮತ್ತು ವೃತ್ತದ ನಡುವೆ ವ್ಯತ್ಯಾಸಗಳೇನು?

ಚಟುವಟಿಕೆ 3

## ಆಯತವನ್ನು ಪರಿಚಯಿಸುವುದು

### ಸೂಚನೆಗಳು

1. ಮಕ್ಕಳಿಗೆ ಚೌಕ ಮತ್ತು ಆಯತವನ್ನು ತೋರಿಸಿ, ಅವುಗಳನ್ನು ಹೋಲಿಸಲು ಮತ್ತು ಅವುಗಳ ನಡುವೆ ವ್ಯತ್ಯಾಸವನ್ನು ತಿಳಿಸಲು ಅವಕಾಶ ಕೊಡುವುದು.
2. ಎರಡೂ ಒಂದೇ ರೀತಿ ಇವೆಯೇ? ಏನು ವ್ಯತ್ಯಾಸವಿದೆ?
3. ಚೌಕವು ನಾಲ್ಕು ಅಂಚುಗಳನ್ನು ಹೊಂದಿದ್ದು, ನಾಲ್ಕೂ ಒಂದೇ ಉದ್ದವಿರುತ್ತವೆ. ಆದರೆ ಆಯತದಲ್ಲಿ ಎರಡು ಅಂಚುಗಳು ಒಂದೇ ಉದ್ದವನ್ನು ಹೊಂದಿರುತ್ತವೆ ಎಂದು ವಿವರಿಸುವುದು. ಆದರೆ ಎರಡೂ ಆಕೃತಿಗಳಿಗೆ ನಾಲ್ಕು ಅಂಚುಗಳು ಹಾಗೂ ನಾಲ್ಕು ಮೂಲೆಗಳು ಇರುತ್ತವೆ ಎಂಬುದನ್ನು ವಿವರಿಸುವುದು.



# ಅವರ ಸುತ್ತುಮುತ್ತಲಿನಲ್ಲಿ ಇರುವ ಆಕೃತಿಗಳನ್ನು ಅನ್ವೇಷಿಸುವುದು

## ಕಲಿಕಾ ಫಲಿತಗಳು

ದೈನಂದಿನ ಬದುಕಿನಲ್ಲಿ ಕಾಣಿಸುವ ವಸ್ತುಗಳಿಗೆ ಸಂಬಂಧ ಕಲ್ಪಿಸುತ್ತ, ಪರಿಕಲ್ಪನೆಯನ್ನು ಅರಿತುಕೊಳ್ಳುವುದು ಮತ್ತು ಅದರಿಂದ ನಿರ್ಣಯಗಳನ್ನು ಮಾಡಲಿಕ್ಕೆ ಆಲೋಚಿಸಲು/ಚಿಂತನೆ ಮಾಡಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

- ಮಿಂಚುಪಟ್ಟಿಗಳು **F3.2** – ಬಳೆ, ಬಿಂದಿ, ಚೆಂಡು, ಲಿಂಬೆಹಣ್ಣು, ಬಾಟಲಿಯ ಮುಚ್ಚಳ, ಸಣ್ಣತಟ್ಟೆ, ಟಬ್ಬದ ತಳಭಾಗ, ಲೋಟದ ಬಾಯಿ, ಕೈಗಡಿಯಾರದ ಡಯಲ್, ಉಂಗುರ, ಕಾಗದದ ರಾಕೆಟ್, ಐಸ್‌ಕ್ರೀಮ್ ಕೋನ್‌ಗಳು, ಕಾಗದದ ಕೋನ್‌ಗಳು, ಬೆಟ್ಟಗಳು, ಕ್ರಿಸ್‌ಮಸ್ ಮರಗಳು, ತ್ರಿಕೋನಾಕಾರದ ಮೇಲ್ಛಾವಣಿಗಳು, ಕರವಸ್ತ್ರ, ಕೇರಂ ಬೋರ್ಡ್, ಬ್ಲಾಕ್/ಘನಾಕೃತಿಗಳು, ಫೋಟೋ ಫ್ರೇಮ್, ಹುಲ್ಲುಹಾಸು, ಕೆರೆ, ಇವೆಲ್ಲಇರುವ ಚಿತ್ರಗಳು.
- ಪ್ಲಾಸ್ಟಿಕ್‌ನ ಆಕಾರಗಳು
- ಮಿಂಚುಪಟ್ಟಿಗಳು **F3.3-1-4**
- ತರಗತಿಯಲ್ಲಿರುವ ವಸ್ತುಗಳು




## ಸೂಚನೆಗಳು

**ಆಕೃತಿಗಳನ್ನು ಪರಿಚಯಿಸುವುದು – ಒಂದು ದಿನಕ್ಕೆ ಒಂದು ಆಕೃತಿ ಮಾತ್ರ. ವೃತ್ತದೊಂದಿಗೆ ಶುರು ಮಾಡಿ, ನಂತರ ಚೌಕ, ತದನಂತರ ತ್ರಿಭುಜ ಪರಿಚಯಿಸುವುದು.**

1. ಆ ದಿನ ಪರಿಚಯಿಸಬೇಕಿರುವ ಆಯಾ ಆಕೃತಿಗಳ ಚಿತ್ರವಿರುವ ಮಿಂಚುಪಟ್ಟಿಯನ್ನು ಪ್ರದರ್ಶಿಸುವುದು. ಮತ್ತೊಮ್ಮೆ ಪುನರಾವರ್ತನೆ ಮಾಡುವ ಮೂಲಕ ವೃತ್ತವನ್ನು ಪರಿಚಯಿಸುವುದು ಮತ್ತು ಇದಕ್ಕೆ ಅಂಚುಗಳಿರುವುದಿಲ್ಲ ಎಂಬುದನ್ನು ತೋರಿಸಿ ಹೇಳುವುದು.
2. ನಾವು ಪ್ರತಿನಿತ್ಯ ಬಳಸುವ ಅನೇಕ ವಸ್ತುಗಳು ವೃತ್ತಾಕಾರವನ್ನು ಹೊಂದಿರುತ್ತವೆ ಎಂಬುದನ್ನು ಮಕ್ಕಳಿಗೆ ತಿಳಿಸುವುದು. ತಟ್ಟೆ, ಬಳೆಯನ್ನು ತೆಗೆದು ತೋರಿಸುವುದು. ಎರಡುಚಿಕ್ಕ ತಟ್ಟೆಗಳು ಮತ್ತು ಬಳೆಗಳನ್ನು ಎರಡೂ ಕಡೆಯಿಂದ ವೃತ್ತದೊಳಗೆ ತೂರಿಸಿ, ಅವರಿಗೆ ಆಕೃತಿಯನ್ನು ಮುಟ್ಟಿ ನೋಡಲು ಹೇಳುವುದು. ಮಕ್ಕಳಿಗೆ ಇದನ್ನು ಒಬ್ಬೊಬ್ಬರೇ ಮಾಡಲು ಹೇಳುವುದು. ಈ ವಸ್ತುಗಳಿಗೆ ಅಂಚುಗಳಿವೆಯೇ ಎಂದು ಮಕ್ಕಳಿಗೆ ಕೇಳುವುದು. ಅವರು ವಸ್ತುವಿನ ಆಕೃತಿ ಯಾವುದೆಂದು ಹೇಳಬಲ್ಲರೇ ಎಂದು ಪ್ರಶ್ನಿಸುವುದು.
3. ತಟ್ಟೆಯನ್ನು ನೆಲದ ಮೇಲೆ ಇಟ್ಟು, ಸೀಮೆಸುಣ್ಣದಿಂದ ಅದರ ಸುತ್ತಲೂ ಟ್ರೇಸ್ ಮಾಡಲು ಹೇಳುವುದು. ನಂತರ ಅವರಿಗೆ ತರಗತಿಯಲ್ಲಿ ಸುತ್ತಲೂ ನೋಡಿ, ಏನಾದರೂ ದುಂಡಗಿರುವ ವಸ್ತು ಕಾಣುತ್ತದೆಯೇ ಎಂದು ಗುರುತಿಸಲು ಹೇಳುವುದು. ಮಕ್ಕಳಿಗೆ ತರಗತಿಯಲ್ಲಿರುವ ವಸ್ತುಗಳನ್ನು ತೆಗೆದುಕೊಂಡು ಬರಲು ಅವಕಾಶ ಕೊಡುವುದು.
4. ಎರಡನೇ ದಿನ ಇದೇ ಪ್ರಕ್ರಿಯೆಯನ್ನು ಚೌಕದೊಡನೆ ಪುನರಾವರ್ತನೆ ಮಾಡುವುದು (ಚೌಕಾಕಾರದ ಕಾಗದದ ಹಾಳೆ/ಚೌಕಾಕಾರದ ಡಬ್ಬಿ ಅಥವಾ ಅದರ ಮುಚ್ಚಳ/ಟೈಲ್/ಕಟ್ಟಿಗೆಯ ಘನಾಕೃತಿಗಳು/ಕುಳಿತುಕೊಳ್ಳುವ ಚಾಪೆ)
5. ಮೂರನೇ ದಿನ ತ್ರಿಭುಜವನ್ನು ಪರಿಚಯಿಸುವುದು (ಒಂದು ಕಾಗದದ ವಿಮಾನ/ಹುಟ್ಟುಹಬ್ಬದ ಕ್ಯಾಪ್/ಫನ್ನೆಲ್) ಅವರ ಸುತ್ತಮುತ್ತಲೂ ಇರುವ ಯಾವುದಾದರೂ ತ್ರಿಕೋನಾಕೃತಿಯ ವಸ್ತುಗಳು.
6. ನಾಲ್ಕನೇ ದಿನ ಮಕ್ಕಳಿಗೆ 3.2 ಮಿಂಚುಪಟ್ಟಿಯನ್ನು ತೋರಿಸುವುದು ಮತ್ತು ಅವರು ಯಾವ ಆಕೃತಿಗಳನ್ನು ಗುರುತಿಸಬಲ್ಲರು ಎಂದು ತೋರಿಸಲು ತಿಳಿಸುವುದು. ಎಲ್ಲ ಮಕ್ಕಳಿಗೂ ಮುಕ್ತವಾಗಿ ಗುರುತಿಸಲು ಅವಕಾಶ ಮಾಡಿಕೊಡುವುದು, ನಂತರ ವಸ್ತುಗಳನ್ನು ತೋರಿಸಿ, ಅವುಗಳ ಆಕೃತಿ ಯಾವುದು ಎಂದು ಮಕ್ಕಳಿಗೆ ಪ್ರಶ್ನಿಸುವುದು.


## ವರ್ಗೀಕರಣ, ವಿಂಗಡಣೆ ಮತ್ತು ಹೊಂದಿಸುವುದು

### ಕಲಿಕಾ ಫಲಿತಗಳು

ಆಕೃತಿಯ ಆಧಾರದ ಮೇಲೆ ವಸ್ತುಗಳನ್ನು ಪ್ರತ್ಯೇಕಿಸಲು (ವಿಂಗಡಣೆ ಮತ್ತು ಹೊಂದಿಸುವುದು) ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

- ಪ್ಲಾಸ್ಟಿಕ್ ಆಕೃತಿಗಳು (ಕೆಂಪು, ನೀಲಿ ಮತ್ತು ಹಳದಿ ಬಣ್ಣಗಳ ವೃತ್ತ, ಚೌಕ ಮತ್ತು ತ್ರಿಕೋನ ಆಕೃತಿಗಳು)
- ಸ್ಪಂಜಿನ ಆಕೃತಿಗಳು (ಕೆಂಪು, ನೀಲಿ ಮತ್ತು ಹಳದಿ ಬಣ್ಣಗಳ ವೃತ್ತ, ಚೌಕ ಮತ್ತು ತ್ರಿಕೋನ ಆಕೃತಿಗಳು)
- ಡೊಮಿನೋ ಆಕೃತಿಗಳು ಮತ್ತು ಬಣ್ಣಗಳು (ಅಕ್ಷರ ಸಂಸ್ಥೆಯ ಟಿಎಲ್‌ಎಮ್–4 ಮತ್ತು ಟಿಎಲ್‌ಎಮ್–5)



### ಸೂಚನೆಗಳು

**ತರಗತಿ ನಿರ್ವಹಣೆ**

- ವಸ್ತುಗಳನ್ನು ಇಟ್ಟುಕೊಂಡು ಚಟುವಟಿಕೆಯನ್ನು ವಿವರಿಸಲು ಸ್ವಲ್ಪ ಸಮಯವನ್ನು ಕೊಡುವುದು.
- ಚಟುವಟಿಕೆ ಮುಗಿದ ನಂತರ ಜೋರಾಗಿ ಹೇಳುವಂತೆ ಅಥವಾ ಕೈಯನ್ನು ಮೇಲೆತ್ತಲು ಮಕ್ಕಳಿಗೆ ಹೇಳುವುದು. ಇದು ಮೊದಲನೇ ಹಂತವಾಗಿರುವುದರಿಂದ, ನಿಯಮಗಳನ್ನು ತರಗತಿಯಲ್ಲಿ ವಿವರಿಸಿ ಹೇಳುವುದು ಮತ್ತು ಮಕ್ಕಳು ಅವುಗಳನ್ನು ಪಾಲಿಸುವರೆಂದು ಖಾತರಿಪಡಿಸಿಕೊಳ್ಳುವುದು.
- ಮುಂದಿನ ಚಟುವಟಿಕೆಯನ್ನು ಅವರು ಆರಂಭಿಸುವ ಮುನ್ನ ಅವರ ಕಾರ್ಯವನ್ನು ಪರಿಶೀಲಿಸುವುದು.

**ಗುಂಪು ಚಟುವಟಿಕೆ**

*ಚಟುವಟಿಕೆ 1*

### ಆಕೃತಿಗಳ ವಿಂಗಡಣೆ

- ಒಂದು ಗುಂಪಿನಲ್ಲಿ 4–5 ಮಕ್ಕಳು ಇರುವಂತೆ ಮಕ್ಕಳ ಗುಂಪುಗಳನ್ನು ಮಾಡುವುದು.
- ಒಂದು ಬಟ್ಟಲಿನ ತುಂಬಾ ಒಂದೇ ಬಣ್ಣದ ಅಥವಾ ಒಂದೇ ಗಾತ್ರದ ವೃತ್ತ, ಚೌಕ ಮತ್ತು ತ್ರಿಭುಜಾಕೃತಿಗಳನ್ನು ಮಕ್ಕಳಿಗೆ ನೀಡುವುದು. (ಅಂದರೆ ಎಲ್ಲ ಗುಂಪುಗಳು ಒಂದೇ ಗಾತ್ರ ಮತ್ತು ಬಣ್ಣದ, ಆದರೆ ಬೇರೆ ಆಕೃತಿಗಳ ವಸ್ತುಗಳನ್ನು ಪಡೆಯುತ್ತಾರೆ)
- ಮಕ್ಕಳು ಅವುಗಳನ್ನು ವೃತ್ತಗಳು, ಚೌಕಗಳು ಮತ್ತು ತ್ರಿಭುಜಗಳ ಆಕೃತಿಗಳಾಗಿ ವಿಂಗಡಿಸಿ, ಗುಂಪು ಮಾಡುವುದು.
- ಮೂರು ವಿಭಿನ್ನ ಬಣ್ಣಗಳು ಮತ್ತು ವಿಭಿನ್ನಗಾತ್ರಗಳ ವೃತ್ತ, ಚೌಕ ಮತ್ತು ತ್ರಿಭುಜ ಆಕೃತಿಗಳ ಕಾರ್ಡುಗಳನ್ನು ಮಕ್ಕಳಿಗೆ ನೀಡುವುದು. ಶಿಕ್ಷಕರು ಪ್ರತಿ ಆಕೃತಿಯ ಒಂದು ಕಾರ್ಡನ್ನು ಮುಂದಿಡುವುದು. ಅದೇ ಆಕೃತಿಯ ಕಾರ್ಡನ್ನು ಹೊಂದಿಸುವಂತೆ ಮಗುವಿಗೆ ಹೇಳುವುದು.

ಚಟುವಟಿಕೆ 2

## ಆಕೃತಿಗಳನ್ನು ಹೊಂದಿಸುವುದು

- ಒಂದು ಗುಂಪಿನಲ್ಲಿ 4–5 ಮಕ್ಕಳು ಇರುವಂತೆ ಮಕ್ಕಳ ಗುಂಪುಗಳನ್ನು ಮಾಡುವುದು.
- ಒಂದು ಬಟ್ಟಲಿನ ತುಂಬ 2–3 ಬಣ್ಣದ ಮತ್ತು ಗಾತ್ರದ ವೃತ್ತ, ಚೌಕ ಮತ್ತು ತ್ರಿಭುಜಾಕೃತಿಗಳನ್ನು ಮಕ್ಕಳಿಗೆ ನೀಡುವುದು. (ಅಂದರೆ ಎಲ್ಲ ಗುಂಪುಗಳು ವಿವಿಧ ಗಾತ್ರ ಮತ್ತು ಬಣ್ಣದ ವಿಭಿನ್ನ ಆಕೃತಿಗಳ ವಸ್ತುಗಳನ್ನು ಪಡೆಯುತ್ತಾರೆ)
- ಒಂದೇ ಆಕೃತಿಯ ಮಿಂಚುಪಟ್ಟಿಯನ್ನು ಕೊಟ್ಟು, ಮಗುವಿಗೆ ಅದೇ ಆಕೃತಿಯ ಎಲ್ಲ ವಸ್ತುಗಳನ್ನು ಆ ಕಾರ್ಡಿನ ಸುತ್ತ ಇಡಲು ಹೇಳುವುದು (ಯಾವುದೇ ಬಣ್ಣ, ಗಾತ್ರವಿದ್ದರೂ ಸರಿ, ಆಕೃತಿ ಒಂದೇ ಇರಬೇಕು) – ಬಣ್ಣ ಮತ್ತು ಗಾತ್ರ ಯಾವುದೇ ಇದ್ದರೂ ಸರಿ, ಒಂದೇ ಆಕೃತಿಯ ವಸ್ತುಗಳನ್ನು ಹುಡುಕುತ್ತ, ಮಕ್ಕಳಿಗೆ ನೀವು ಒಮ್ಮೆ ಈ ಚಟುವಟಿಕೆ ಮಾಡಿ ತೋರಿಸುವುದು.
- ಮಕ್ಕಳಿಗೆ ಮೊದಲು ಈ ಚಟುವಟಿಕೆಯನ್ನು ಗುಂಪಿನಲ್ಲಿ, ಆಮೇಲೆ ಇಬ್ಬರು ಮಕ್ಕಳು ಜೋಡಿಯಾಗಿ ಮಾಡಲು ಅವಕಾಶ ಕೊಡುವುದು.

ಚಟುವಟಿಕೆ 3

## ಡೊಮಿನೋ ರೈಲು ರಚಿಸುವುದು

- ಕೆಲವು ಗುಂಪುಗಳು ಚಟುವಟಿಕೆ 2ನ್ನು ಮಾಡುತ್ತಿರುವಾಗ, ಇನ್ನೊಂದಿಷ್ಟು ಮಕ್ಕಳಿಗೆ ಡೊಮಿನೋ ಕಾರ್ಡುಗಳನ್ನು ಹೊಂದಿಸುತ್ತ, ಅವುಗಳ ಒಂದು ರೈಲು ಮಾಡಲು ಅವಕಾಶ ಮಾಡಿಕೊಡುವುದು.

# ವಿನ್ಯಾಸಗಳನ್ನು ರಚಿಸುವುದು

## ಕಲಿಕಾ ಫಲಿತಗಳು

ತಾರ್ಕಿಕ ಅನುಕ್ರಮವೊಂದನ್ನು ಗುರುತಿಸಿ ಮತ್ತು ವಿಸ್ತರಿಸಿ, ವಿನ್ಯಾಸವೊಂದನ್ನು ಮುಂದುವರಿಸುವುದು ಮತ್ತು ಸರಳವಾದ ವಿನ್ಯಾಸಗಳನ್ನು ರಚಿಸುವುದು.

## ಕಲಿಕಾ ಸಾಮಗ್ರಿಗಳು


- ಕ್ಯೂ ಕಾರ್ಡ್
- ಬ್ಲಾಕ್/ಘನಾಕೃತಿಗಳು, ಮಣಿಗಳು ಮತ್ತು ಗುಂಡಿಗಳು (ಬಟನ್‌ಗಳು)

## ಶಿಕ್ಷಕರ ಪೂರ್ವಸಿದ್ಧತೆ

- ಇಬ್ಬರು ಮಕ್ಕಳು ಜೋಡಿಯಾಗಿ ಕೆಲಸ ಮಾಡುವಂತೆ, ಇಬ್ಬಿಬ್ಬರ ಹೆಸರುಗಳ ಪಟ್ಟಿ ಮಾಡುವುದು ಮತ್ತು ಜೋಡಿಗಳು ಕುಳಿತು ಕೆಲಸ ಮಾಡಲು ಜಾಗಗಳನ್ನು ಗುರುತಿಸುವುದು. ಒಟ್ಟು ಗುಂಪುಗಳ ಸಂಖ್ಯೆಯನ್ನು ಮತ್ತು ಪ್ರತಿ ಗುಂಪಿಗೂ ಕೊಡಲು ಸಾಮಗ್ರಿಗಳನ್ನು ನಿರ್ಧರಿಸಿಕೊಳ್ಳುವುದು. ತರಗತಿಯು ದೊಡ್ಡದಿದ್ದರೆ, ಹಾಳೆಯಲ್ಲಿ ಎಲ್ಲ ಬರೆದುಕೊಂಡು ಲೆಕ್ಕಾಚಾರ ಮಾಡಿಕೊಳ್ಳುವುದು.
- ಮಕ್ಕಳು ಕುಳಿತು ಕೆಲಸ ಮಾಡಲು ಸ್ಥಳವನ್ನು ನಿಗದಿ ಮಾಡಿ, ಆ ಸ್ಥಳದಲ್ಲಿ ಕೆಲಸ ಶುರು ಮಾಡುವ ಮೊದಲೇ ಕ್ಯೂ ಕಾರ್ಡುಗಳು ಮತ್ತು ಸಾಮಗ್ರಿಗಳನ್ನು ಸಿದ್ಧಪಡಿಸಿ ಇಡುವುದು.
- ಅಗತ್ಯವಿದ್ದರೆ ಹೆಚ್ಚುವರಿ ಕ್ಯೂ ಕಾರ್ಡುಗಳನ್ನು ಮಾಡಿಕೊಳ್ಳುವುದು.

**ಹಂತ 1: ಮಾದರಿಯ ನಕಲು ಮಾಡುವುದು/ಯಥಾರೂಪ ಮಾಡುವುದು**

- ಮಕ್ಕಳನ್ನು ಜೋಡಿಗಳನ್ನಾಗಿ ಮಾಡಿ, ಪ್ರತಿಯೊಂದು ಜೋಡಿಗೂ ಒಂದು ಸಾಮಗ್ರಿಯನ್ನು ಹಂಚಿಕೆ ಮಾಡುವುದು. (ಬ್ಲಾಕ್/ಘನಾಕೃತಿಗಳು, ಮಣಿಗಳು, ಗುಂಡಿಗಳು ಇತ್ಯಾದಿ)
- ಮೊದಲನೇ ಹಂತದಲ್ಲಿ ಶಿಕ್ಷಕರು ಕ್ಯೂ ಕಾರ್ಡುಗಳನ್ನು ತೋರಿಸಿ, ಹೇಗೆ ಮಾಡುವುದು ಎಂದು ನಿರೂಪಿಸುವುದು ಮತ್ತು ಮಕ್ಕಳಿಗೆ ಕ್ಯೂ ಕಾರ್ಡುಗಳಿಂದ ನಕಲು ಮಾಡಲು ಅವಕಾಶ ಮಾಡಿಕೊಡುವುದು.
- ಈ ಕೆಳಗಿನವುಗಳನ್ನು ಬಳಸಿ, ವಿನ್ಯಾಸಗಳನ್ನು ನಕಲು ಮಾಡಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.
- ವೃತ್ತ ತ್ರಿಭುಜ/ವೃತ್ತ ತ್ರಿಭುಜ/ವೃತ್ತ ತ್ರಿಭುಜ – ಒಂದೇ ಬಣ್ಣದಲ್ಲಿ
- ವೃತ್ತ ತ್ರಿಭುಜ ಚೌಕ/ವೃತ್ತ ತ್ರಿಭುಜ ಚೌಕ/ವೃತ್ತ ತ್ರಿಭುಜ ಚೌಕ – ಒಂದೇ ಬಣ್ಣದಲ್ಲಿ
- ವೃತ್ತ ತ್ರಿಭುಜ ಚೌಕ/ಚೌಕ ವೃತ್ತ ತ್ರಿಭುಜ/ತ್ರಿಭುಜ ಚೌಕ ವೃತ್ತ – ಒಂದೇ ಬಣ್ಣದಲ್ಲಿ



**ಹಂತ 2: ಸರಳ ವಿನ್ಯಾಸವನ್ನು ನಕಲು ಮಾಡುವುದು ಮತ್ತು ವಿಸ್ತರಿಸುವುದು**

- ಮಕ್ಕಳು ವಿನ್ಯಾಸಗಳನ್ನು ನಿಖರವಾಗಿ ನಕಲು ಮಾಡಲು ಸಮರ್ಥರಾದ ಕೂಡಲೇ, ಚಟುವಟಿಕೆಯನ್ನು ಇನ್ನೊಂದು ಹಂತಕ್ಕೆ ವಿಸ್ತರಿಸುವುದು.
- ಮಕ್ಕಳಿಗೆ ಅವರು ಮೊದಲು ಮಾಡಿದ ವಿನ್ಯಾಸವನ್ನು ವಿಸ್ತರಿಸುವಂತೆ ತಿಳಿಸುವುದು, ಅಂದರೆ ವಿನ್ಯಾಸದ ಮೊದಲ ಭಾಗ ಮಾತ್ರ. ಉದಾ: ವೃತ್ತ ತ್ರಿಭುಜ ಅಥವಾ ವೃತ್ತ ತ್ರಿಭುಜ ಚೌಕ.
- ಮಕ್ಕಳಿಗೆ ಎಲ್ಲ ಮೂರು ಸಂಯೋಜನೆ ಇರುವ ವಿನ್ಯಾಸಗಳನ್ನು ವಿಸ್ತರಿಸುವಂತೆ ಹೇಳುವುದು. ಉದಾ: ವೃತ್ತ ತ್ರಿಭುಜ ಚೌಕ / ಚೌಕ ವೃತ್ತ ತ್ರಿಭುಜ/ತ್ರಿಭುಜ ಚೌಕ ವೃತ್ತ.

ವಿಸ್ತರಣಾ ಚಟುವಟಿಕೆ

## ವಿನ್ಯಾಸಗಳನ್ನು ರಚಿಸುವುದು

### ಕಲಿಕಾ ಫಲಿತಗಳು

- ಮಕ್ಕಳು ಆಕೃತಿಗಳನ್ನು ದಿನನಿತ್ಯದ ಸಾಮಾನ್ಯ ಆಹಾರಕ್ಕೆ ಸಂಬಂಧ ಕಲ್ಪಿಸಲು ಸಮರ್ಥರಾಗುವುದು.
- ದೈನಂದಿನ ಬದುಕಿನಲ್ಲಿ ಕಾಣುವ ವಿನ್ಯಾಸಗಳನ್ನು ಆಕೃತಿಗಳಿಗೆ ಸಂಬಂಧ ಕಲ್ಪಿಸಲು ಸಮರ್ಥರಾಗುವುದು.

**ಚಟುವಟಿಕೆ 1**

### ಆಹಾರದಲ್ಲಿ ಆಕೃತಿಗಳು

### ಕಲಿಕಾ ಸಾಮಗ್ರಿಗಳು

- ಚಾರ್ಟ್ ಹಾಳೆ – ಆರು ಮಕ್ಕಳ ಒಂದು ಗುಂಪಿಗೆ ಒಂದು ಹಾಳೆ
- ಮಾದರಿ ಮಾಡುವ ಜೇಡಿಮಣ್ಣು (ಕ್ಲೇ)

### ಸೂಚನೆಗಳು


1. ಆರು ಮಕ್ಕಳು ಇರುವಂತೆ ಇಡೀ ತರಗತಿಯ ಮಕ್ಕಳನ್ನು ಐದು ಗುಂಪುಗಳನ್ನಾಗಿ ಮಾಡುವುದು. ಈ ಕೆಳಗಿನ ಅಂಶಗಳ ಕುರಿತು ಆಲೋಚನೆ ಮಾಡುವಂತೆ ಮಕ್ಕಳಿಗೆ ಹೇಳುತ್ತ, ಅವರೊಂದಿಗೆ ಚರ್ಚಿಸುವುದು.
    - ಪ್ರತಿದಿನ ತಿನ್ನುವ ಒಂದು ಆಹಾರ – ಅದರ ಆಕೃತಿ ದುಂಡಗೆ ಇರುತ್ತದೆ (ದೋಸೆ, ಇಡ್ಲಿ, ರೊಟ್ಟಿ)
    - ಹಬ್ಬದ ಸಮಯದಲ್ಲಿ ತಿನ್ನುವ ಮೂರು ವಿಶೇಷ ಆಹಾರ, ಅದರಲ್ಲಿ ಒಂದು ದುಂಡಗೆ ಇರುವುದು (ಲಡ್ಡು, ಬಾಲೂಶಾ, ಸಿಹಿ ಪೂರಿ), ಅದರಲ್ಲಿ ಒಂದು ಚೌಕಾಕಾರ ಇರುವುದು (ಬರ್ಫಿ, ಕೇಕ್, ಮೈಸೂರ್‌ಪಾಕ್) ಮತ್ತು ಒಂದು ತ್ರಿಭುಜಾಕಾರದಲ್ಲಿರುವುದು (ಸಮೋಸ, ಬಾದಾಮ್ ಪುರಿ, ಮೋದಕ)
2. ಮಾದರಿ ಮಾಡುವ ಜೇಡಿಮಣ್ಣಿನ್ನು ತೋರಿಸುವುದು ಮತ್ತು ಮಕ್ಕಳಿಗೆ ಅದರಲ್ಲಿ ವಿನ್ಯಾಸಗಳನ್ನು ಮಾಡಲು ಅವಕಾಶ ಮಾಡಿಕೊಡುವುದು – ನಂತರ ಅವುಗಳನ್ನು ಚಾರ್ಟಿಗೆ ಅಂಟಿಸಿ, ಹೆಸರಿಸಿ, ಅವನ್ನು ಮೂಲೆಯಲ್ಲಿ ಇಡುವುದು.


**ಚಟುವಟಿಕೆ 2**

### ವಿನ್ಯಾಸಗಳಲ್ಲಿ ಆಕೃತಿಗಳು


### ಕಲಿಕಾ ಸಾಮಗ್ರಿಗಳು

**C3.4** ಮಿಂಚುಪಟ್ಟಿಗಳು – 10; ಪಜಲ್‌ಗಳು – 5 ಮೊಗ್ಗಿನ ರೇಖಾಚಿತ್ರದ ವಿನ್ಯಾಸವಿರುವ ಒಂದು ಚೌಕಾಕಾರದ ಕಟ್‌ಔಟ್











ಚಟುವಟಿಕೆ 3

## ಚಪ್ಪಲಿಯ ಸೋಲ್‌ನಲ್ಲಿರುವ ವಿನ್ಯಾಸಗಳನ್ನು ಗುರುತಿಸುವುದು

### ಕಲಿಕಾ ಸಾಮಗ್ರಿಗಳು


ಸೋಲ್‌ನಲ್ಲಿ ವಿವಿಧ ವಿನ್ಯಾಸಗಳನ್ನು ಹೊಂದಿರುವ ಚಪ್ಪಲಿಗಳು (ಕನಿಷ್ಠ 5–7)


### ಸೂಚನೆಗಳು

ಕೆಲವು ಮಕ್ಕಳು ಚಟುವಟಿಕೆ 2 ಮತ್ತು ಇನ್ನು ಕೆಲವು ಮಕ್ಕಳು ಚಟುವಟಿಕೆ 3 ಅನ್ನು ಮಾಡುತ್ತ, ಆಮೇಲೆ ಅದಲು ಬದಲು ಮಾಡಿ, ಎಲ್ಲ ಮಕ್ಕಳು ವೈಯಕ್ತಿಕವಾಗಿ ಎರಡೂ ಚಟುವಟಿಕೆಯನ್ನು ಮಾಡುವಂತೆ ಚಟುವಟಿಕೆಗಳನ್ನು ಆಯೋಜಿಸುವುದು

1. ಐದು ಮಕ್ಕಳಿಗೆ ಪಜಲ್‌ಗಳ ಮೇಲೆ ಕೆಲಸ ಮಾಡಲು ಅವಕಾಶ ಮಾಡಿಕೊಡುವುದು ಮತ್ತು ಅವರು ಮುಗಿಸಿದೊಡನೆ ಬೇರೆ ಪಜಲ್‌ಗಳನ್ನು ಅದಲು ಬದಲು ಮಾಡುವುದು.
2. ಇನ್ನುಳಿದ ಮಕ್ಕಳಿಗೆ ಅವರ ಅಂಗಾಲನ್ನು ಕಾಗದದ ಮೇಲೆ ಇಟ್ಟು ಟ್ರೇಸ್ ಮಾಡಲು ತಿಳಿಸುವುದು, ಒಂದು ಚಪ್ಪಲಿ/ಶೂ ತೆಗೆದುಕೊಂಡು, ಅದರ ಸೋಲ್‌ನಲ್ಲಿರುವ ವಿನ್ಯಾಸವನ್ನು ನಕಲು ಮಾಡಲು ತಿಳಿಸುವುದು.
3. ಪಜಲ್‌ಅನ್ನು ಮಾಡಿ ಮುಗಿಸಿರುವ ಮಕ್ಕಳಿಗೆ ಸೋಲ್ ವಿನ್ಯಾಸಗಳ ಮೇಲೆ ಕೆಲಸ ಮಾಡಲು ಅವಕಾಶ ಕೊಡುವುದು, ಸೋಲ್ ವಿನ್ಯಾಸ ನಕಲು ಮಾಡಿದ ಮಕ್ಕಳು ಪಜಲ್ ಮೇಲೆ ಕೆಲಸ ಮಾಡುವುದು.
4. ಎಲ್ಲ ಮಕ್ಕಳು ಪಜಲ್ ಮತ್ತು ಸೋಲ್ ವಿನ್ಯಾಸದ ಮೇಲೆ ಕೆಲಸ ಮಾಡುವುದನ್ನು ಖಾತ್ರಿಪಡಿಸಿಕೊಳ್ಳುವುದು.


# ಶಿಕ್ಷಕರ ಕೈಪಿಡಿ – 4 ರಿಂದ 5 ವರ್ಷದವರಿಗೆ


















Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**

New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

© 200788